CONSIDERATION OF THE MYSORE PROHIBITION BILL, 1959.

Motion to consider—Debate (*Contd.*)

†ಶ್ರೀ ವೀರೇಂದ್ರ ಪಾಟೀಲ್ (ಅಬ್‌ಕಾರಿ ಮತ್ತು ಪಾನನಿರೋಧ ಶಾಖ ಸಚಿವರು).—ಮಾನ್ಯ ಅಧ್ಯಕ್ಷರೇ, ಕಳೆದ ಮೂರು ದಿವಸಗಳಿಂದ ಪಾನನಿರೋಧ ಮಸೂದೆಯ ಮೇಲೆ ನಡೆದಿರುವ ಚರ್ಚೆಯಲ್ಲಿ ವಿರೋಧ ಪಕ್ಷದ ಅನೇಕ ಮಾನ್ಯ ಸದಸ್ಯರು ಭಾಗವಹಿಸಿದ್ದಾರೆ. ಅನೇಕ ಸದಸ್ಯರು ಈ ಮಸೂದೆಯನ್ನು ಬಹು ಕಟುವಾಗಿ ಟೀಕಿಸಿದ್ದಾರೆ. ಎನ್ನುವುದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅದು ಎಲ್ಲರಿಗೂ ಗೊತ್ತಿದೆ. ಕಳೆದ ಮೂರು ದಿವಸ ನಡೆದ ಚರ್ಚೆಯಲ್ಲಿ ಮಾನ್ಯ ಸದಸ್ಯರು ಕೆಲವು ಉತ್ತಮ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ಮಾನ್ಯ ಸದಸ್ಯರು ತೀವ್ರವಾಗಿ ಟೀಕಿಸಿದ್ದಾರೆ. ಸಲಹೆ ಕೊಟ್ಟಿರುವವರಿಗೂ ತೀವ್ರವಾಗಿ ಟೀಕಿಸಿರುವವರಿಗೂ ಎಲ್ಲರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಮೂರು ದಿವಸಗಳ ಚರ್ಚೆಯಲ್ಲಿ ನನಗೆ ಅನಿಸಿದ್ದೇನೆಂದರೆ ಈ ಸಭೆಯಲ್ಲಿ ಒಂದು ಕೋರ್ಟ್ ಮಾರ್ಷಲ್ ನಡೆದಿದೆ ಎಂದು ಅನಿಸಿತು. ನಾನು ಒಬ್ಬ ವಾರ್ ಕ್ರಿಮಿನಲ್ ಎನೋ ಎಂದು ಅನಿಸಿತು. ಈ ಮಧ್ಯ ಪಾನನಿರೋಧ ಮಸೂದೆಯನ್ನು ತಂದು ದೇಶಕ್ಕೆ ಬಹಳ ಘೋರವಾಗಿ ಅನ್ಯಾಯ ಮಾಡಿದ್ದೇನೆ ಬಹಳ ಪಾಪದ ಕೆಲಸಕ್ಕೆ ಗುರಿಯಾಗಿದ್ದೇನೆ ಎಂದು ಸದಸ್ಯರು ಬಹ ಕಟುವಾಗಿ ಟೀಕಿಸಿದರು ಇದನ್ನು ನೋಡಿದರೆ ಮನಸ್ಸಿಗೆ ಸ್ವಲ್ಪ ನೋವು ಆಗುತ್ತದೆ. ಈ ತರದ ಟೀಕೆ ವಿಶೇಷವಾಗಿ ಪ್ರಜಾ ಸೋಷಲಿಸ್ಟ್ ಪಕ್ಷದ ಮಾನ್ಯ ಸದಸ್ಯರಿಂದ ಬಂದಿದೆ. ಇದಕ್ಕೆ ಸ್ವಲ್ಪ ವಿಷಾದವು ಮತ್ತು ಆಶ್ಚರ್ಯವೂ ಕೂಡ ಉಂಟಾಗುತ್ತದೆ. ಕಮ್ಯುನಿಸ್ಟ್ ಸದಸ್ಯರಾದ ಶ್ರೀಮಾನ್ ನರಸಿಂಹನ್ ಅವರು ಈ ರೀತಿ ಟೀಕೆ ಮಾಡಿದ್ದು ಸ್ವಾಭಾವಿಕ. ಅವರ ಬಗ್ಗೆ ನಾನು ಹೆಚ್ಚು ಅಕ್ಷೇಪಣೆ ತೆಗೆದುಕೊಳ್ಳಬೇಕಾಗಿಲ್ಲ. ಆದರೆ ಪಿ. ಎಸ್. ಪಿ. ಸದಸ್ಯರಾದ ಶ್ರೀ ಶ್ರೀನಿವಾಸ ಶೆಟ್ಟರು ಶ್ರೀ ಪುಟ್ಟಣ್ಣನವರು ಮತ್ತು ಉಳಿದ ಇನ್ನೂ ಅನೇಕ ಸದಸ್ಯರು ಇಷ್ಟು ಕಟುವಾಗಿ ಈ ಮಸೂದೆಯ ಮೇಲೆ ಟೀಕೆ ಮಾಡುತ್ತಾರೆಂದು ನನಗೆ ಅನಿಸಿರಲಿಲ್ಲ. ಒಂದು ಮಾತು ಹೇಳಬೇಕಾದರೆ ಕೆಲವು ಸದಸ್ಯರು ಈ ಮಸೂದೆಯ ಬಗ್ಗೆ ಲಘುವಾಗಿ ಟೀಕೆ ಮಾಡಿದ್ದಾರೆ.

ಶ್ರೀ ಪಿ. ಎನ್. ಪುಟ್ಟಣ್ಣ.—ಈ ಮಸೂದೆಯ ಬಗ್ಗೆ ಟೀಕೆ ಮಾಡಬೇಕೆಂದು ನಾವು ಟೀಕಿಸಿಲ್ಲ. ಆದರೆ ಈ ಮಸೂದೆಯಲ್ಲಿರುವ ದೋಷ ದೋಷಗಳನ್ನು ಹೇಳಿದ್ದೇವೆ.

ಶ್ರೀ ವೀರೇಂದ್ರ ಪಾಟೀಲ್.—ವಿರೋಧ ಪಕ್ಷದ ನಾಯಕರು ಈ ಚರ್ಚೆಯಲ್ಲಿ ಅದೇಕೊ ಭಾಗವಹಿಸಲಿಲ್ಲ.

ವಿರೋಧಪಕ್ಷದ ನಾಯಕರು ಚರ್ಚೆಯಲ್ಲಿ ಭಾಗವಹಿಸಲಿಲ್ಲ. ಆದರೂ ನಡುನಡುವೆ ಅವರು ಮಾಡಿದ Interruption ನಲ್ಲಿ. ಅವರ ವಿಚಾರವೇನು ಎನ್ನುವುದು ಕಂಡುಬರುತ್ತಿತ್ತು. ಅನೇಕ ಜನ ವಿದೇಶೀಯರು ಬಂದಾಗ, ಅವರೆಲ್ಲ ನೆರೆದಾಗ, ಅವರಿಗೆ Wine, liquor, brandy, Whisky ಇಂಥವನ್ನು ಸರ್ವ್ ಮಾಡುವುದಕ್ಕೆ ಯಾವತರಹ ನಿರ್ಬಂಧವೂ ಇಲ್ಲ. ಆದರೆ ಅವರ ಜೊತೆಯಲ್ಲಿ ಭಾರತೀಯರಾದ ನಮ್ಮಂಥವರಿದ್ದರೆ ನಮಗೆ ಏಕೆ ಪಾನನಿರೋಧದ ಶಾಸನ ಜಾರಿಗೆ ಬರಬೇಕು! ನಮಗೂ ಅವರಂತೆಯೇ ಅಧಿಕಾರ ಏಕೆ ಸಿಕ್ಕಬಾರದು ? ಎನ್ನುವ ಅರ್ಥದಲ್ಲಿ ಹೇಳಿದರು, ಈ ಮಾತಿನಿಂದ ಅವರಿಗೆ ಪಾನನಿರೋಧ ನೀತಿಯಲ್ಲಿ ವಿಶ್ವಾಸವಿದೆಯೋ ಇಲ್ಲವೋ ಎನ್ನುವ ಸಂಶಯ ಬರುತ್ತದೆ.

ಶ್ರೀ ಜೆ. ಬಿ. ಮುಲ್ಲಾರಾಧ್ಯ.—ಇದು ತಪ್ಪು ತಿಳುವಳಿಕೆ ಎಂದು ಈ ಸಂದರ್ಭದಲ್ಲಿ ಸೂಚಿಸಬೇಕಾಗಿದೆ. ಈ ರೀತಿ ಮಾಡುವುದರಿಂದ ಭಾರತೀಯರಾದ ನಮಗೆ ಅವಮಾನ ಮಾಡಿದಂತಾ

(ಶ್ರೀ ಜೆ. ಬಿ. ಮರ್ಕಾರಾಧ್ಯ)

ಗುತ್ತದೆಂದು ನಾನು ಹೇಳಿದೆ. ಆದರೆ ಮಾನ್ಯ ಮಂತ್ರಿಗಳು ನನ್ನ ಅಭಿಪ್ರಾಯವನ್ನು ಸ್ವಲ್ಪ ತಿರುವು ಮುರುವಾಗಿ ಹೇಳುತ್ತಿದ್ದಾರೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಸುಮ್ಮನೆ ಕುಳಿತಿದ್ದರೂ ಆಪಾದನೆ ಮಾಡಿದರೆ ಏನು ಮಾಡುವುದಕ್ಕಾಗುತ್ತದೆ?

Sri M. C. NARASIMHAN.—Intoxication:—

ಶ್ರೀ ವೀರೇಂದ್ರ ಪಾಟೀಲ್.— Intoxication ಇದ್ದರೆ ಈ ಬಿಲ್ಲನ್ನು ತರುತ್ತಿರಲಿಲ್ಲ ಅದು ಹೋಗಬೇಕೆಂದೇ ಇದನ್ನು ತಂದಿದ್ದೇನೆ.

ಪ್ರಾರಂಭದಲ್ಲಿ ಹೇಳಿದಂತೆ ಇದೇನು ಹೊಸದಲ್ಲ. ನಮ್ಮ ಸರಸ್ಥಾನದಲ್ಲಿ ನಾಲು ತರಹ ಕಾಯಿದೆಗಳು ಜಾರಿಯಲ್ಲವೆ. ಕೊಡಗಿನಲ್ಲಿ ಬೇರೆ, ಮಂಗಳೂರಿನಲ್ಲಿ ಬೇರೆ, ಹಳೆಯ ಮೈಸೂರು ಭಾಗದಲ್ಲಿ ಬೇರೆ, ಬೊಂಬಾಯಿ ಕರ್ನಾಟಕದಲ್ಲಿ ಎಂದರೆ ಬೆಳಗಾಂ ಡಿವಿಜನ್‌ನಲ್ಲಿ ಬೇರೆ ಇದೆ. ಒಂದೇರಾಜ್ಯದಲ್ಲಿ ನಾಲ್ಕು ತರಹ ಕಾಯಿದೆಗಳು ಬೇರೆ ಬೇರೆ ಇರುವುದು ಸರಿಯಲ್ಲ. ಏಕೀಕರಣವಾದಮೇಲೆ ಅನೇಕ ಕಾಯಿದೆಗಳನ್ನು ಕ್ರೋಡೀಕರಿಸಿ Uniform legislation ಮಾಡಿದ್ದೇವೆ. ಅದೇ ರೀತಿಯಾಗಿ ಇಲ್ಲಿಯೂ ಮಾಡಿದ್ದೇವೆ. ಈ ರೀತಿ Uniform legislation ತರುವಾಗ ಜಾರಿಯಲ್ಲಿರುವ ನಾಲ್ಕು ಕಾಯಿದೆಗಳಲ್ಲಿ ಉತ್ತಮವಾದ Provisions ಏನಿದೆಯೋ ಅವನ್ನು ಅಳವಡಿಸಿಕೊಳ್ಳಬೇಕೆನ್ನುವ ಉದ್ದೇಶದಿಂದ ಬೊಂಬಾಯಿ ಕಾಯಿದೆಯ ಕೆಲವು ಭಾಗಗಳನ್ನು ಅಳವಡಿಸಿದ್ದೇವೆ. ಹೀಗೆ ಮಾಡಿ ಒಂದು ಬಿಲ್ಲನ್ನು ತಯಾರಿಸಿ ತಮ್ಮ ಮುಂದಿಡಲು ಇದರಿಂದ ಯಾವ ಪಾಪ ಮಾಡಲಾಯಿತು, ಎಂದು ನನಗೆ ಅನ್ನಿಸುವುದಿಲ್ಲ. ಬೊಂಬಾಯಿ ಕಾಯಿದೆಯಲ್ಲಿ ಇದ್ದುದ್ದನ್ನೆ ಇಟ್ಟಿದ್ದೀರಿ ಎಂದು ಹೇಳಿದರು. ಒಂದುವೇಳೆ ಬೊಂಬಾಯಿ ಆಕ್ಟ್ ಕಾಪಿ ಮಾಡಿ ತಂದಿದ್ದರೂ ನಾವು ಮಾಡಿದ್ದು ಕೆಟ್ಟ ಕೆಲಸವೇ ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಕಾಯಿದೆಯನ್ನು ಪಾಸ್ ಮಾಡುವುದರಲ್ಲಿ regional spirit ಏಕೆ? ಬೊಂಬಾಯಿ ಕಾಯಿದೆ ಇದೆ, ಅದುಬೇಡ; ಮದ್ರಾಸ್ ಆಕ್ಟ್ ಇದೆ, ಅದು ಬೇಡ, ಮೈಸೂರು ಆಕ್ಟ್ ಇದೆ, ಅದುಬೇಡ ಎನ್ನುವುದರ ಬದಲು ಬಿಲ್‌ನಲ್ಲಿ ಯೋಗ್ಯವಾದ ಪ್ರಾವಿಷನ್ ಇದೆಯೇ ಇಲ್ಲವೇ ಎನ್ನುವುದನ್ನು ನೋಡಬೇಕು. ಬರೀ ಬೊಂಬಾಯಿ ಆಕ್ಟ್ ಇದೆ, ಅದು ನಮ್ಮ ಮೈಸೂರಿನವರಿಗೆ ಏಕೆ ಬೇಕು ಎನ್ನುವ ವಾದದಲ್ಲಿ ನನಗೆ ಅರ್ಥವಾಗುವುದಿಲ್ಲ. ಅದಾಗ ಬಾರದು.

ಶ್ರೀ ಜಿ. ಎಸ್. ಪುಟ್ಟಣ್ಣ.—ಆ ರೀತಿ ಯಾರು ಹೇಳಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಹೇಳದೆ ಹೋದರೂ ಕೂಡ ತಮ್ಮ ವಾದದಲ್ಲಿ ಅದೇ ಅರ್ಥ ಬರುತ್ತದೆ.

Sri G. N. PUTTANNA.—It is a wrong inference.

ಶ್ರೀ ವೀರೇಂದ್ರ ಪಾಟೀಲ್.—ಬೊಂಬಾಯಿ ಕಾನೂನನ್ನು ನಮ್ಮ ಮೇಲೆ ಹೊರಿಸುತ್ತಿದ್ದಾರೆಂದು ಹೇಳಿದರು. ಬೊಂಬಾಯಿ ಕಾಯಿದೆಯಲ್ಲಿ ಸರಿಯಾದ ಪಾಲಿಷನ್ಸ್ ಇದ್ದರೆ ಅವನು ಕಾಪಿ ಮಾಡುವುದರಲ್ಲಿ ತಪ್ಪಿಲ್ಲ.

ಶ್ರೀ ವಿ. ಶ್ರೀನಿವಾಸಶೆಟ್ಟಿ.— ಏನು ಕೇಳಿದರೂ ಬೊಂಬಾಯಿ ಕಾಯಿದೆಯಲ್ಲವೆ ಎಂದು ಹೇಳುತ್ತೀರಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೈಸೂರಿನಲ್ಲಿರುವ ಪರಿಸ್ಥಿತಿಗನುಗುಣವಾಗಿ ಈ ಕಾಯಿದೆ ಬರಲಿಲ್ಲವೆಂದು ಹೇಳಿದ್ದೇವೆ. ಅದನ್ನು ತಂದದ್ದು ತಪ್ಪು ಎಂದು ಹೇಳಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ತಪ್ಪೊಬ್ಬರ ವಿಷಯವನ್ನು ನಾನು ಹೇಳಲಿಲ್ಲ. ಮನೊದೆಯ ಮೇರೆ ಮಾತನಾಡಿರುವ ಸದಸ್ಯರು ವ್ಯಕ್ತಪಡಿಸಿರುವ ವಿಚಾರಗಳನ್ನು ಹೇಳುತ್ತಿದ್ದೇನೆ,

ಪ್ರತಿಯೊಬ್ಬರೂ ನಾನು ಹೇಳಲಿಲ್ಲ ನೀನು ಹೇಳಿಲ್ಲವಾದರೆ ಅದಕ್ಕೆ ಕೊನೆ ಮೊದಲಿಲ್ಲ. ಒಳ್ಳೆಯ ವಿಷಯಕದಲ್ಲಿರುವುದನ್ನು ಅಳವಡಿಸಿಕೊಳ್ಳುವುದಕ್ಕೆ ತಮ್ಮ ಅಡ್ಡಿಯಿಲ್ಲವೆನ್ನುವುದು ನ್ಪಷ್ಟವಾಗಿದೆ. ಇದಕಾ್ಗಿ ತಮಗೆಲ್ಲ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಈ ಮಸೂದೆಯನ್ನು ತಮ್ಮ ಮುಂದೆ ಇಟಾ್ಗ ಇದರ ಮೇಲಿನ ಚರ್ಚೆಯಲ್ಲಿ ಭಾಗ ವಹಿಸಿದಂಥ ಅನೇಕ ಮಾನ್ಯ ನದಸ ರು, ನಾನು ಇದೇ ಹೇಳಿದಹಾಗೆ, ಬಹಳ ಲಘುವಾಗಿ ಟೀಕಿಸಿದರು. ಶ್ರೀಮಾರ್ ಶ್ರೀನಿವಾಸ ಶೆಟ್ಟರು barbarous ಇದೆ ಎಂದರು; Mad Legislation, Mad Government ತಂದಿದ್ದು ಎಂದು ಶ್ರೀಮಾರ್ ಅರ್ಮುಗಂ ಅವರು ಹೇಳಿದರು ! ಶ್ರೀ ಮಾರ್ ಮುಕ್ಕಣ್ಣಪ್ಪನವರು ದೀಪಾವಳಿ ಅಳಿಯ ತಂದಿದ್ದು, ದೀಪಾವಳಿ ಅಳಿಯ ಓದಿದಂಥ ಕಾನೂನು ಈ ಮಸೂದೆ ಎಂದು ಹೇಳಿದರು. ಅದೇ ರೀತಿ ಶ್ರೀಮಾರ್ ಪುಟ್ಟಣ್ಣನವರು ಈ ಮಸೂದೆ ಹಿಂದುವೇಳೆ ದುರ್ಬ್ಯವದಿಂದ ಜಾರಿಗೆ ಬಂದರೆ ನಮ್ಮ ದೇಶದಲ್ಲಿ ಬಹಳ ದೊಡ್ಡ ಅನಾಹುತವಾಗುತ್ತದೆ, ಕೋಲಾಹಲವಾಗುತ್ತದೆ, ರಕ್ತದ ಕಾಲುವೆಗಳು ಹರಿಯುತ್ತವೆ ಎಂದು ಹೇಳಿದರು

ಶ್ರೀ ಜಿ. ಎಚ್. ಪುಟ್ಟಣ್ಣ —ಮಸೂದೆಯಿಂದ ಎಂದು ಹೇಳಲಿಲ್ಲ. 109 ನೇಯ ಕ್ಲಾಸಿನಿಂದ ಆಗುತ್ತದೆ ಎಂದು ಹೇಳಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್.—ಮಸೂದೆ ಎಂದಮೇಲೆ 109 ನೇಯ ಕ್ಲಾಜ್ ಸಹ ಅದರಲ್ಲಿಯೇ ಬರುತ್ತದೆ. ಅದರ ಅರ್ಥವಿಷೇಶ.

Sri J. B. MALLARADHYA.—I only request that the Hon'ble Minister be pleased not to read meanings which were never intended by certain Members. Particularly the Hon'ble Minister began with an accusation against the Leader of the Opposition which was not meant by him.

Sri VEERENDRA PATIL.—It was stated by Sri Puttanna that if this Act was brought into force, it would result in blood-shed.

Sri G. N. PUTTANNA.—Only section 109, I said.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ನದಸ್ಯರು ಸ್ವಲ್ಪ ನವಧಾನದಿಂದ ಕೇಳಿದರೆ ಸೆಕ್ಷನ್ 109ಕ್ಕೆ ಬರುತ್ತೇನೆ. ಆಗ ನನ್ನ ವಿಚಾರಗಳನ್ನು ಹೇಳುತ್ತೇನೆ—ತಮ್ಮ ವಿಚಾರಗಳನ್ನು ಈಗಾಗಲೇ ಹೇಳಿದ್ದೀರಿ.

ಕೆಲವು ಮಾನ್ಯ ನದಸ್ಯರು ಈ ಒಂದು ವಿಧೇಯಕವನ್ನು ಚುನಾವಣೆಗಳು ಕೆಲವೇ ದಿವಸ ಗಳಿರುವಾಗ ತಂದದ್ದು ಕೂಡ ಈ ಮಸೂದೆಯಲ್ಲಿ ಕೆಲವು ಹೆಚ್ಚಿನ ಅಧಿಕಾರಗಳನ್ನು ಸರ್ಕಾರ ಇಟ್ಟುಕೊ ಡು, ತಮ್ಮ ಅಧಿಕಾರಿಗಳ ಕೈಗೆ ಆ ಅಧಿಕಾರವನ್ನು ಕೊಟ್ಟು ಅದರಿಂದ ವಿರೋಧ ಪಕ್ಷದ ಜನರಿಗೆ ಅನ್ಯಾಯ ಅತ್ಯಾಚಾರಗಳನ್ನು ಮಾಡಿಸಿ ಮತ್ತೆ ತಾವು ಅಧಿಕಾರಕ್ಕೆ ಬರುವ ಉದ್ದೇಶವನ್ನಿಟ್ಟುಕೊಂಡು ತಂದಿದ್ದಾರೆಂದು ಹೇಳಿದರು. ಇದು ಬಹಳ ದುರ್ಬ್ಯವದ ನಂಗತಿ.

Sri G. N. PUTTANNA—.If the Hon'ble Minister yields, I will clarify. I want to know the reason why Government wish to retain Banga ore as a wet area. Gulberga as a wet area and Raichur as a wet area. Do you know the reason? If you intend to bring toddy to Gulberga from Bidar, on the way you can distribute it to your voters. From any part of the country, you can bring toddy to Bangalore and on the way you can purchase any number of voters. That is the idea with which you kept these places wet. Otherwise, why don't you introduce prohibition wholesale in the whole State. In the guise of bringing toddy to Bangalore, you can easily distribute toddy to voters on the way.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಆರೀತಿ ಏಕೆ ಹೇಳಿದರು ಎಂಬುದನ್ನು ಸಮರ್ಥಿಸಿ ಮಾತನಾಡುತ್ತಿದ್ದಾರೆ. ಗುಲ್ಬರ್ಗ, ರಾಯಚೂರ್ ಮತ್ತು ಬೆಂಗಳೂರಿನಲ್ಲಿ ಪಾನ ನಿರೋಧ ಶಾಸನವನ್ನು ಜಾರಿಯಲ್ಲಿ ತರಲಿಲ್ಲದೆ ಉಳಿದಕಡೆ ತಂದಿದ್ದಾರೆ. ಇಲ್ಲಿ ಎಲ್ಲ ಜನರನ್ನೂ ಕುಡಿಸಿ ಅವರಿಂದ ಓಟುಪಡೆದು ಮತ್ತೆ ಅಧಿಕಾರದಲ್ಲಿ ಬರಬೇಕು ಎಂದು ಈ ರೀತಿ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಸರಿ, ಸೇಂದಿ, ಹೆಂಡ, ಕುಡಿಸಿ ಓಟು ತೆಗೆದುಕೊಳ್ಳುತ್ತಾರೆನ್ನುವ ಅಭಿಪ್ರಾಯ ಅವರಿಗಿದ್ದರೆ, ಅವರೆಲ್ಲರೂ ಅದೇರೀತಿ ಓಟು ತೆಗೆದುಕೊಂಡು ಬಂದಿದ್ದಾರೋ ಏನೋ ಗೊತ್ತಿಲ್ಲ. ನಾವು ಮಾತ್ರ ಆರೀತಿ ಚುನಾವಣೆಗಳಲ್ಲಿ ಗೆದ್ದು ಬಂದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ.

Sri J. B. MALLARADHYA.—This kind of a talk is likely to provoke a lot of unpleasantness. Please avoid such observations. Merely on the ground that one of the Members said that, does it lie in his mouth to return the compliment to all of us? No, no.

Sri V. SRINIVASA SHETTY.—You are unable to reply to any of our criticism on merits. The Hon'ble Minister is merely making a political speech.

2-30 P.M.

Sri J. B. MALLARADHYA.—Once again I approval to the Hon'ble Minister not to give room for provacation.

ಶ್ರೀ ಕೆ. ಎಲ್. ನರಸಿಂಹಯ್ಯ.—Point of order ಮಂತ್ರಿಗಳು ನಿಂತುಕೊಂಡು ಮಾತನಾಡುತ್ತಿರುವಾಗ, ಅವರು ಕೂತುಕೊಂಡು ಮಾತನಾಡಬಹುದೇ ?

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಪಾಯಿಂಟ್ ಆಫ್ ಆರ್ಡರ್ ಎಲ್ಲಿದೆ ?

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಇದೆ. ರಿಟಾರ್ಟ್ ಮಾಡುವುದು ಬೇಡ ಅನ್ನುವುದಿಲ್ಲ. ಅವರು ನಿಂತು ಜವಾಬು ಕೊಡುತ್ತಿರುವಾಗ ಕುಳಿತು ರಿಟಾರ್ಟ್ ಮಾಡುವುದು ಸರಿಯಲ್ಲ ಶ್ರೀಮಾನ್ ಮಲ್ಲಾರಾಧ್ಯರು ಬಂದು ಹೇಳುತ್ತಾ ಇರುತ್ತಾರೆ, ಹಿಂದೆ ಇನ್ನೊಬ್ಬರು ಮಾತನಾಡುತ್ತಾ ಇರುತ್ತಾರೆ. How can the proceedings go on like that ?

Sri G. N. PUTTANNA.—Even works turn when insulted. How can he expect us to keep quiet when such an allegation is made?

Mr. SPEAKER.—The same can saib of this side also.

ಶ್ರೀ ಜಿ. ಎನ್. ಪುಟ್ಟಣ್ಣ.—ನೀವು ಹಾಗೆ ಕಾಮೆಂಟ್ ಮಾಡಿದರೆ, ನಾನು ಏನು ಮಾಡಲಿ ?

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರಲ್ಲಿ ನನ್ನದು ಒಂದು ವಿನಂತಿ ಇದೆ. ನಾನು ಯಾವ ಒಂದು ಪ್ರೊವೊ ಕೇಶನ್ನೂ ಮಾಡುವುದಕ್ಕೆ ಹೋಗುವುದಿಲ್ಲ. ನನ್ನ ಸ್ನೇಹಿತರಾದ ಪುಟ್ಟಣ್ಣನವರು ಇವತ್ತು ಗುಲ್ಬರ್ಗ ಮತ್ತು ರಾಯಚೂರಿನಿಂದ ಹೆಂಡವನ್ನು ಬೆಂಗಳೂರಿಗೆ ತರುತ್ತೇವೆಂದು ಮಧ್ಯೆ ದಾರಿಯಲ್ಲಿ ಹಂಚುವುದಕ್ಕೆ ನಮಗೆ ಅವಕಾಶವಿದೆ ಎಂದು ಹೇಳಿದರು. ತಾವೂ ದುಡ್ಡು ಕೊಟ್ಟರೆ, ಬೇಕಾದಷ್ಟು ಹೆಂಡ ಆ ಜಾಗಗಳಲ್ಲಿ ಸಿಗುತ್ತದೆ. ಅದಕ್ಕೆ ಗಾವರ್ನ್‌ಮೆಂಟ್ ಬೇಕಾಗಿಯೇ ಇಲ್ಲ.

Sri G. N. PUTTANNA.—I have written to the Election Commissioner on a previous occasion pointing this out to them.

Mr. SPEAKER.—I remember that charges were made against Congress Members that they were getting the people drink for their election purpose, but those charges were also refuted.

ಶ್ರೀ ವೀರೇಂದ್ರ ಪಾಟೀಲ್.—ನನಗೆ ಆಶ್ಚರ್ಯವಾಗುತ್ತದೆ. ಮಾನ್ಯ ಮಲ್ಲಾರಾಧ್ಯರು ಮತ್ತು ವಿರೋಧಪಕ್ಷದ ನನ್ನ ಸ್ನೇಹಿತರು ಇದು ಸಿಲ್ಲಿ ಬಿಲ್ಲು, ಇದು ಮ್ಯಾಡ್ ಬಿಲ್ಲು ಎಂದು

ಹೇಳಿದರು. ಅವರು ಬೆನ್ನು ಹತ್ತಿ ನಮ್ಮನ್ನು ಟೀಕೆ ಮಾಡಿದಾಗ, ನಾನು ಸುಮ್ಮನೆ ಕೂತು ಕೊಂಡು, ಈಗ ನಾನು ಅವುಗಳಿಗೆ ಉತ್ತರ ಕೊಡಬಾರದೇ ? ಇದು ಇಂಪಾರ್ಟೆಂಟ್ ಬಿಲ್. ಇದನ್ನು ನಮರ್ಥನೆ ಮಾಡದೇನೆ ಬಿಡಬೇಕೇ ?

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಾಳೆ ಬೆಳಿಗ್ಗೆಯಿಂದ ಮೈಸೂರು ಸ್ಟೇಟಿನಲ್ಲೆಲ್ಲಾ ಕಂಪ್ಲೀಟಾಗಿ ಪ್ರೊಹಿಬಿಶನ್ ತಂದಿದ್ದರೆ, ಈ ತರಹ ಟೀಕೆಗೆ ಅವಕಾಶವಿರುತ್ತಿತ್ತೆ ಎಂದು ನನ್ನ ಟೀಕೆಯ ಸಾರಾಂಶ. ಹಾಗೆ ಮಾಡದ್ದರಿಂದ ಟೀಕೆಗಳಿಗೆ ಅವಕಾಶ ಬಂದಿದೆ. ಮುಕ್ಕಣ್ಣಪ್ಪ ನವರು ಹೇಳಿದ ಹಾಗೆ ಅರ್ಧನಾರೀಶ್ವರ ರೂಪದಿಂದ, ಈ ರೂಪ ಬಂದಿದೆ. ನಾಳೆಯಿಂದ ದೇಶಾದ್ಯಂತ ಪ್ರೊಹಿಬಿಷನ್ ತಂದುಬಿಡುತ್ತೇವೆಂದಿದ್ದರೆ, ಟೀಕೆ ಮಾಡುತಾ ಇರಲಿಲ್ಲ. ಟೀಕೆ ಮಾಡುವುದಕ್ಕೆ ಏನು ಕಾರಣವೆಂದರೆ, ಇದೇ ಕಾರಣ.

ಅಧ್ಯಕ್ಷರು.—ಅವರು ಉತ್ತರ ಕೊಡಲಿ.

ಶ್ರೀ ವೀರೇಂದ್ರ ಪಾಟೀಲ್.—ಶ್ರೀಮಾನ್ ಮಲ್ಲಾರಾಧ್ಯರಿಗೆ ಒಂದು ಮಾತು ಹೇಳುತ್ತೇನೆ. ವಿರೋಧ ಪಕ್ಷದವರು ಟೀಕೆ ಮಾಡುವುದು ಬೇಡ ಎನ್ನುವುದಿಲ್ಲ. ಟೀಕೆ ಮಾಡುವಾಗ ಡಿಕ್ಷ್ನರಿಯಲ್ಲಿ ಒಳ್ಳೆಯ ಪದಗಳು ಇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವುಗಳನ್ನು ತರಿಸಿ ಕೊಡಿ.

ಶ್ರೀ ವೀರೇಂದ್ರ ಪಾಟೀಲ್.—ಡಿಕ್ಷನೆರಿಯಲ್ಲಿ ತಾವು ಓದಿಕೊಳ್ಳಬೇಕು. ನಾನು ಓದ ಬೇಕಾಗಿಲ್ಲ. ನಾನು ಆ ರೀತಿ ಶಬ್ದಗಳನ್ನು ಉಪಯೋಗ ಮಾಡುತ್ತಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಕೆಲವು ಶಬ್ದಗಳನ್ನು ಲಿಸ್ಟ್ ಮಾಡಿಕೊಟ್ಟರೆ, ನಾವು ಉಪಯೋಗಿಸುತ್ತೇವೆ.

Mr. SPEAKER.—Order order.

ಶ್ರೀ ವೀರೇಂದ್ರ ಪಾಟೀಲ್.—ತಾವು ಬೇಕಾದ್ದು ಹೇಳಿದರೂ ನಾನು ಸಮಾಧಾನದಿಂದ ಕೇಳಿದೆ. ನಾನು ಹೇಳುವುದನ್ನೂ ತಾವು ದಯವಿಟ್ಟು ಸಮಾಧಾನದಿಂದ ಕೇಳಬೇಕು. ಟೀಕೆ ಮಾಡಿದರೂ, ಉಪಯೋಗವಾಗುವಂಥ ಟೀಕೆ ಮಾಡಿ. ಅಂಥ ಟೀಕೆಯನ್ನು ಸ್ವಾಗತ ಮಾಡಲೇಬೇಕು.

ಈಗ ಪುಟ್ಟಣ್ಣನವರು ಕೇಳುತಾ್ತರೆ, ಬೆಂಗಳೂರು, ರಾಯಚೂರು ಗುಲ್ಬರ್ಗ ಜಿಲ್ಲೆಗಳನ್ನು ಬಿಟ್ಟು ಉಳಿದ ಕಡೆಗಳಲ್ಲಿ ಏಕೆ ಪ್ರೊಹಿಬಿಷನ್ ಇರಬೇಕೆಂದು. ಅರ್ಮುಗಂರವರು, ನೀವು ನಿಮ್ಮ ಗುಲ್ಬರ್ಗದ ಎಲ್ಲ ಜನರಿಗೂ ಕುಡಿಯುವುದಕ್ಕೆ ಕೊಟ್ಟು, ಉಳಿಕೆಯವರಿಗೆ ಕುಡಿಯಬೇಡಿ ಎಂದು ಏಕೆ ಹೇಳುತ್ತೀರಿ ಎಂದು ಪ್ರಶ್ನೆ ಹಾಕಿದರು. ಈ ಚರ್ಚೆ ಹೊಸದೇನೂ ಅಲ್ಲ. ಹೋದಸಲವೇ ಸಾಕಷ್ಟು ಚರ್ಚೆಯಾಗಿದೆ. ಈಗ ಸ್ಟೇಟಿನಲ್ಲಿರತಕ್ಕಂಥ 19 ಜಿಲ್ಲೆಗಳಲ್ಲಿ, 16 ಜಿಲ್ಲೆಗಳಲ್ಲಿ ಪಾನ ನಿರೋಧ ಶಾಸನ ಜಾರಿಯಲ್ಲಿದೆ. ಸಂಸ್ಥಾನದ ಶೇಕಡ 80 ಏರಿಯಾದಲ್ಲಿ ಪಾನನಿರೋಧ ಜಾರಿಯಲ್ಲಿದೆ. ಈಗ ಉಳಿದಿರುವುದೆಲ್ಲಾ ಮೂರು ಜಿಲ್ಲೆಗಳು. ಆ ಮೂರು ಜಿಲ್ಲೆಗಳಲ್ಲೂ ಆದಷ್ಟು ತೀವ್ರವಾಗಿ ಈ ಶಾಸನವನ್ನು ಜಾರಿಗೆ ತರಬೇಕೆಂದು ಉದ್ದೇಶ ಸರ್ಕಾರಕ್ಕಿದೆಯೆಂದು ಘೋಷಣೆ ಮಾಡಿದ್ದೇವೆ. ಇಷ್ಟೇ ವರ್ಷಗಳಲ್ಲ ತರಬೇಕೆಂದಿದ್ದೇವೆ. ಎನ್ನುವುದನ್ನು ಸ್ಪಷ್ಟ ಮಾಡಿದ್ದೇವೆ. ಎರಡು-ಮೂರು ವರ್ಷಗಳಲ್ಲಿ ಆ ಜಿಲ್ಲೆಗಳಲ್ಲೂ ತರಬೇಕೆಂದಿದ್ದೇವೆ. ಇದನ್ನು ಕೇಂದ್ರ ಸರ್ಕಾರಕ್ಕೂ ನಾನು ಬರೆದಿದ್ದೇನೆ. ಕೇಂದ್ರ ಸರ್ಕಾರ ನಮ್ಮ ಸಹಾಯಕ್ಕೆ ಬಂದು, ಕೊರತೆ ನೀಗಿ ಕೊಟ್ಟರೆ ಆದಷ್ಟು ತೀವ್ರವಾಗಿ ಚೋಟಲ್ ಪ್ರೊಹಿಬಿಷನ್ ತರುವುದಕ್ಕೆ ತಯಾರಿದ್ದೇನೆ. ನಮ್ಮ ಸರ್ಕಾರದ ನೀತಿಯನ್ನು ಕೇಂದ್ರ ಸರ್ಕಾರಕ್ಕೆ ನಾನು ತಿಳಿಸಿದ್ದೇನೆ. ಸೆಪ್ಟೆಂಬರಿನಲ್ಲಿ ನಾಲ್ಕು-ಐದನೆಯ ತಾರೀಖು, ಸೆಂಟ್ರಲ್ ಪ್ರೊಹಿಬಿಷನ್ ಬೋರ್ಡ್ ಮೀಟಿಂಗ್ ಇದೆ. ಬಹುಷಃ ಇದೂ ಚರ್ಚೆಗೆ ಬರಬಹುದು ; ಇನ್ನೂ ಅಜೆಂಡ ಬಂದಿಲ್ಲ.

ಶ್ರೀ ಜೆ. ವೆಂಕಟೇಗೌಡ.—ಕೇಂದ್ರ ಸರ್ಕಾರ ಏಕೆ ಕೇಳಬೇಕು. ಇದು ಸ್ಟೇಟ್ ಟಿಸ್ಸಿನಲ್ಲಿದೆ.

ಶ್ರೀ ವೀರೇಂದ್ರ ಪಾಟೀಲ್.—ತಮಗೆ ಗೊತ್ತಿದೆ ನಾನು ಏಕೆ ಹೇಳುತ್ತಿದ್ದೇನೆನ್ನುವುದು ಈ ಮೂರು ಜಿಲ್ಲೆಯಿಂದ ನಮಗೆ ಮೂರು ಕೋಟಿ ರೂಪಾಯಿ ವರಮಾನ ಕೊಗುತ್ತದೆ.

Sri M C. NARASIMHAN.—Why do you have this revenue from filthy liquor? Throw it away. That is the attitude you have adopted in other Districts.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದುಕಡೆ ಪಾಪದ ಹಣ ಅನ್ನುತ್ತೀರಿ. ಇನ್ನೊಂದು ಕಡೆ ವರಮಾನ ಹೋಗುತ್ತದೆಂದು ಹೇಳುತ್ತೀರಿ. ಏಳು ಕೋಟಿ ರೂಪಾಯಿಯನ್ನೇ ಬಿಟ್ಟಿರುವಾಗ ಮೂರು ಕೋಟಿ ರೂಪಾಯಿ ಏನು ಜಾಸ್ತಿ. ವೆಸ್ಟೆಡ್ ಇಂಟರೆಸ್ಟ್ ಇದೆ.

ಶ್ರೀ ವೀರೇಂದ್ರ ಪಾಟೀಲ್.—ವೆಸ್ಟೆಡ್ ಇಂಟರೆಸ್ಟ್ ಇಲ್ಲ. ಮೈಸೂರಿನಲಲ್ಲದಿರುವಾಗಲೂ ಹಾಗೆಯೇ ಹೇಳುತ್ತಿದ್ದಿರಿ. ವೆಸ್ಟೆಡ್ ಇಂಟರೆಸ್ಟ್ ಇದ್ದರೆ ಮೈಸೂರು ಸಿಟಿ ಮತ್ತು ತಾಲ್ಲೂಕಿನಲ್ಲಿ ಇಂಜೆಂಕ್ಷನ್ ಮಾಡುತ್ತಲೇ ಇರಲಿಲ್ಲ. ವೆಸ್ಟೆಡ್ ಇಂಟರೆಸ್ಟ್ ಯಾವುದೂ ಇಲ್ಲ ಎಂದು ತಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಈ ಮೂರು ಜಿಲ್ಲೆಯಿಂದ ನಮಗೆ ಬರುತ್ತಿರುವ ವರ ನಾನ ಜೋಟಲ್ ಪ್ರೊಹಿಬಿಷನ್ನಿನಲ್ಲಿ ಹೋಗುವುದರಿಂದ, ಕೇಂದ್ರ ಸರ್ಕಾರ ಅದನ್ನು ತುಂಬಿ ನಮ್ಮ ಸಹಾಯಕ್ಕೆ ಬರುವಂತೆ ಎಶ್ಟು ಪ್ರಯತ್ನ ಮಾಡುತ್ತಿದ್ದೇವೆ. ಇನ್ನೊಂದು ವಿಷಯದಲ್ಲಿ ತಮ್ಮ ಆಶ್ವಾಸನೆ ಬೇಕು. ಈಗ ಜೋಟರ್ ಪ್ರೊಹಿಬಿಷನ್ನಿನಿಂದ ಮೂರು ಕೋಟಿ ರೂಪಾಯಿ ಹಾನಿಯಾದರೆ, ಈ ವರಮಾನ ಹೋದಮೇಲೆ, ವರಮಾನ ಹೆಚ್ಚಿಸುವುದಕ್ಕೆ ಎಲ್ಲಿಯವರೆಗೆ ಈ ಸಭೆಯವರು ಸಹಕಾರ ನೀಡಲು ಸಿದ್ಧರಿದ್ದಾರೆ?

ಶ್ರೀ ಸಿ. ಕೆ. ರಾಜಶೇಖರಶೆಟ್ಟಿ.—ಪ್ರೊಹಿಬಿಷನ್ ಜಾರಿಗೆ ತಂದಾಗ ಒಂದು ಆಶ್ವಾಸನೆ ಕೊಟ್ಟಿದ್ದರು: ಪ್ರೊಹಿಬಿಷನ್ ಆದ ಲಾಸನ್ನು ಸೇಲ್ಸ್ ಟಾಕ್ಸಿಂದ ರಿಕವರ್ ಮಾಡುತ್ತೇವೆಂದು ಈಗ ಆದರಿಂದ 12 ಕೋಟಿ ರೂಪಾಯಿ ಬರುತ್ತಿದೆ. ಹಿಂದೆ ಹೇಳಿದ್ದು ನುಳ್ಳು ಎಂತ ಇದರಿಂದಲೇ ಒಪ್ಪಿಕೊಳ್ಳಿ.

ಶ್ರೀ ವೀರೇಂದ್ರ ಪಾಟೀಲ್.—ಫ್ಲೈಸ್ ಟಾಕ್ಸೇಶನ್ ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲವೆಂದು ಆಯಿತು.

ಈ ರೀತಿಯಾಗಿ ಅದನ್ನು ತೀವ್ರವಾಗಿ ಪೂರ್ಣವಾಗಿ ಪಾನನಿರೋಧ ಶಾಸನವನ್ನು ನಮ್ಮ ಸ್ಟೇಟಿನಲ್ಲಿ ತರಬೇಕು ಎನ್ನುವ ವಿಚಾರವೇ ಎಂದು ಈಗಾಗಲೇ ಸ್ಪಷ್ಟವಾಗಿ ಈ ವಿಚಾರಗಳನ್ನೆಲ್ಲಾ ತಮ್ಮ ಮುಂದೆ ಇಟ್ಟಿದ್ದೇನೆ. ಅದರಿಂದ ಈಗ ಮತ್ತೆ ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈ ಬಿಲ್ಲಿನ ಮೇಲೆ ಮಾತನಾಡಿದ ಅನೇಕ ಸದಸ್ಯರುಗಳು, ಈ ಬಿಲ್ಲಿನ ಮೇಲೆ ಮಾತನಾಡುವಾಗ ಪ್ರೊಹಿಬಿಷನ್ನು ಪಾಲಿಸಿ ಎನ್ನುವುದು ಫ್ಲೈಸ್ಸೊರು ಆಗುತ್ತದೆ ಆದರಿಂದ ಇದನ್ನು ಸ್ಕ್ರಾಪ್ ಮಾಡಬೇಕು. ಈಗಾಗಲೇ ಇದರಿಂದ ಹವಿನ್ನೆಯದು ಕೋಟಿ ರೂಪಾಯಿಗಳಷ್ಟು ಬರುವ ವರಮಾನವನ್ನು ಏಕೆ ಕಳೆದುಕೊಳ್ಳುತ್ತೀರಿ ಎನ್ನುವ ವಾದ ಬರುತ್ತದೆ ಎಂದು ನನಗೂ ಮೊದಲು ಆ ರೀತಿ ತಲೆಗೆ ಬಂದಿತ್ತು. ಅನೇಕ ಸದಸ್ಯರು ಮಾತನಾಡಿದ ಧಾಟಿ ನೋಡಿದರೆ ಈ ಪ್ರೊಹಿಬಿಷನ್ನು ಎಂದೆಂದಿಗೂ ಯಶಸ್ವಿಯಾಗುವುದಿಲ್ಲ ಮತ್ತು ಇದರಿಂದ ನಿಮಗೆ ಯಶಸ್ಸು ಬರುವುದಿಲ್ಲ ಎನ್ನುವಷ್ಟು ಧಾಟಿಯಲ್ಲೇ ಹೇಳಿದ್ದಾರೆ. ನಾನು ಇಲ್ಲಿ ಈಗ ಏನು ವಿಚಾರವನ್ನು ಹೇಳಬೇಕಾದರೆ ಪ್ರೊಹಿಬಿಷನ್ನು ತತ್ವದಲ್ಲಿ ಯಾರಿಗೆ ವಿಶ್ವಾಸ ಹೋಗಿದೆಯೋ ಅಂಥವರಿಗೆ ಎಷ್ಟು ಹೇಳಿದರು ಅವರಿಗೆ ತೃಪ್ತಿಯಾಗುವುದಿಲ್ಲ. ಕೆಲವು ಮಾನ್ಯ ಸದಸ್ಯರು ನಮ್ಮ ಪಕ್ಷಕ್ಕೆ ಸೇರಿದ ಸದಸ್ಯರು ರಾಷ್ಟ್ರಪಿತರಾಗಿದ್ದ ಮಹಾತ್ಮ ಗಾಂಧಿಯವರ ಕೇವಲ ಅನುಯಾಯಿಗಳಾಗಿದ್ದವರು ಕೂಡ ಈ ಪ್ರೊಹಿಬಿಷನ್ನು ವಿಷಯದಲ್ಲಿ ಹೇಳುವಾಗ ಅವರಿಗೆ ವಿಶ್ವಾಸವಿಲ್ಲ ಎಂದು ಹೇಳುತ್ತಾ ಇದನ್ನು ಸಕ್ಸೆಸ್‌ಫುಲ್ ಮಾಡಿ ಎಂದು ಕೇಳಿದುದನ್ನು ಇಲ್ಲಿ ಏಕೆ ಜಾರಿಗೆ ತರುತ್ತಿದ್ದೀರಿ. ಇದು ಎಂದೆಂದಿಗೂ ಯಶಸ್ವಿಯಾ

ಯಾಗುವುದಿಲ್ಲ ಎನ್ನುವ ಒಂದು ಘೋರಣಿಯಿಂದ ಇಲ್ಲಿ ಮಾತನಾಡುವವರಿಗೆ ಅವರ ಬಗ್ಗೆ ನಾನೇನು ವಿಶೇಷವಾಗಿ ಹೇಳಬೇಕಾಗಿಲ್ಲ. ಇದರ ಬಗ್ಗೆ ದೇಶದ ಗಣ್ಯ ನಾಯಕರುಗಳು ಏನು ಹೇಳಿದ್ದಾರೆ, ಮಹಾತ್ಮ ಗಾಂಧಿಯವರು ಏನು ಹೇಳಿದ್ದಾರೆ ಎನ್ನುವುದು ತಮ್ಮ ಮುಂದೆ ಇಟ್ಟು ಈ ಪ್ರೊಹಿಬಿಷನ್ ವಿಷಯದಲ್ಲಿ ಯಾವ ರೀತಿಯಾಗಿರಬೇಕು, ಪ್ರೊಹಿಬಿಷನ್ನಿನಿಂದ ಜಯ ಸಿಗುತ್ತದೆಯೇ?, ಇಲ್ಲವೇ ? ಎನ್ನುವುದನ್ನು ಹೇಳುವುದಕ್ಕೆ ಹೋಗುತ್ತೇನೆ. ಮಹಾತ್ಮ ಗಾಂಧಿಯವರು ಒಂದು ಕಡೆ ಏನು ಹೇಳಿದ್ದಾರೆಂದರೆ :

I consider drinking spiritious liquors in India to be more than the petty theft-which I do tolerate — by men and women for which they are prosecuted and punished. I do tolerate very unwillingly, it is true, and helplessly because for want of full realisation of the law of life of the modern system of penal code. So long as I do I must advocate the slight punishment of those who manufacture foul liquor and those who persist in drinking it, notwithstanding repeated warnings. I do not hesitate to forcibly prevent my children from rushing into the fire rather than allowing them to fall into the red water.....

ಅವರು ಹೇಳುವಾಗ ಒಂದು ಕಡೆ ನನ್ನನ್ನು ಒಂದು ಗಂಜಿಯ ಕಾಲ ಹಿಂದೂಸ್ತಾನದ ಡಿಕ್ಟೇಟರ್‌ರಾಗಿ ಮಾಡಿದರೆ ಆ ಒಂದು ಗಂಜಿಯಲ್ಲಿ ಮೊದಲನೆ ಕೆಲಸ ಮಾಡುವುದು ಏನೆಂದರೆ, ನಮ್ಮ ದೇಶದಲ್ಲಿರುವ ಎರಾ ಹೆಂಡ ಸಾರಾಯಿ ಅಂಗಡಿಗಳನ್ನು ಬಂದು ಮಾಡುತ್ತೇನೆಂದು ಗಾಂಧಿಯವರು ಹೇಳಿದ್ದಾರೆ. ನನ್ನದು ಏನನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ.

1959ರಲ್ಲಿ ರಾಷ್ಟ್ರಪತಿಗಳಾದ ಶ್ರೀ ರಾಜೇಂದ್ರಪ್ರಸಾದರು ಏನು ಹೇಳಿದ್ದಾರೆಂದರೆ :

On prohibition, as I believe on other measures of social reform, there may always be two opinions, but what is certain is that in a country like ours, abstenance from liquor is a basic reform having economic, and more than that, social and moral sanctions behind it. We cannot therefore waver. Let us accept that challenge with faith in ourselves and hope in the people of our country

Sri C. M. ARUMUGHAM.—Has he said something about partial prohibition.

ಶ್ರೀ ವೀರೇಂದ್ರ ಪಾಟೀಲ್.—ನಿಮ್ಮ ಮುಂದೆ ನಾನೇನು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಉದ್ದೇಶವ ಕಾನೂನನ್ನು ಆದಷ್ಟು ತೀವ್ರವಾಗಿ ತಂದು ಸಂಪೂರ್ಣವಾಗಿ ಪಾನ ನಿರೋಧ ಶಾಸನವನ್ನು ಜಾರಿಗೆ ತರಬೇಕು ಎಂದು ಪಾತ್ರ ನಾನು ಇಲ್ಲಿ ಹೇಳುತ್ತಿದ್ದೇನೆ.

ಶ್ರೀ ಜೆ. ಬಿ. ಮುರ್ಲಾರಾಧ್ಯ.—ಇನ್ನು ಶ್ರೀ ವಿನೋಬಾರವರು ಏನು ಹೇಳಿದ್ದಾರೆ ಎನ್ನುವುದನ್ನು ಹೇಳಿಬಿಡಿ. (ನಗು)

ಶ್ರೀ ವೀರೇಂದ್ರ ಪಾಟೀಲ್.—ಅದನ್ನೂ ಹೇಳಬಹುದು.

Sri C. M. ARUMUGHAM.—Sir, Mahatma Gandhi has said that by drinking a man loses body and soul. Why than has the Minister allowed the body and soul to be lost in some districts of the State ?

ಶ್ರೀ ವೀರೇಂದ್ರ ಪಾಟೀಲ್.—ಶ್ರೀವಾನ್ ಪುಟ್ಟಣ್ಣನವರು ಹೇಳಿದಂತೆಯೇ ಶ್ರೀಮಾನ್ ಅರುಮೊಗ ರವರೂ ಹೇಳುತ್ತಿದ್ದಾರೆ. ಅದರಲ್ಲೇನೂ ವ್ಯತ್ಯಾಸ ಕಂಡುಬರುವುದಿಲ್ಲ. ಕೆಲವು ಮಾನ್ಯ ಸದಸ್ಯರು ಶ್ರೀಮನ್ನಾರಾಯಣರವರ ಎನ್‌ಕ್ವೈರಿ ಕಮಿಟಿ ರಿಪೋರ್ಟಿನ ಬಗ್ಗೆ ಹೇಳಿದರು. ಅವರು ಹೇಳಿರುವ ಎನ್‌ಕ್ವೈರಿ ಕಮಿಟಿ ರಿಪೋರ್ಟಿನಲ್ಲೇ ಪುಟ 101ರಲ್ಲಿ ಏನು ಹೇಳಿದ್ದಾರೆಂದರೆ.

(ಶ್ರೀ ವೀರೇಂದ್ರ ಪಾಟೀಲ್)

We are confident that the programme of prohibition in India will meet with success in view of a number of favourable considerations including cultural traditions and social habits which have always stood against the evil of drink. To qoute Mahatma Gandhi : India is the most promising country in the world for carrying out total prohibition for the simple reason that addiction to drink is not considered respectable or fashionable and is confined only to certain classes of people ಇದು ಅವರ ಕನ್‌ಕ್ಲೂಷನ್ನಿನಲ್ಲಿ ಇದೆ.

ಶ್ರೀ ಜಿ. ವೆಂಕಟೇಗೌಡ..—ಅವರ ಶಿಫಾರಸುಗಳನ್ನು ಎಷ್ಟು ಕಾರ್ಯಗತ ಮಾಡಿದ್ದೀರ ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ಕಾರ್ಯಗತಮಾಡುವುದಕ್ಕೇ ಈ ಬಿಲ್ಲನ್ನು ತಂದು ಇಲ್ಲಿ ತಮ್ಮ ಮುಂದೆ ಇಡಲಾಗಿದೆ. ಇಲ್ಲದೇ ಇದ್ದರೆ ಈ ಬಿಲ್ಲನ್ನು ತರುವ ಅವಶ್ಯಕತೆಯೇ ಇರುತ್ತಿರಲಿಲ್ಲ. ಮತ್ತು ಕಾರ್ಯಗತಮಾಡುವ ಪ್ರಶ್ನೆಯೇ ಇಲ್ಲ. ಈ ರೀತಿಯಾಗಿ ಬಿಲ್ಲನ್ನು ಮಾಡದೇ ಇದನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲ. ಸಂಪೂರ್ಣವಾಗಿ ನಮ್ಮ ದೇಶದಲ್ಲಿ ಪಾನನಿರೋಧವು ಈಗ ಜಾರಿಯಲಿಲ್ಲ, ಆ ರೀತಿಯಾಗಿ ತರಬೇಕೆಂದು ಎಲ್ಲರೂ ಹೇಳುತ್ತಿದ್ದಾರೆ. ಈ ಪಾನನಿರೋಧ ಶಾಸನ ಅಥವಾ ನೀತಿಯಲ್ಲಿ ಸರ್ಕಾರಕ್ಕೆ ಎಷ್ಟು ಜಯವಾಗಿದೆ, ಸರ್ಕಾರದವರು ಈ ಕಾರ್ಯದ ಬಗ್ಗೆ ಎಷ್ಟು ಜಯಪ್ರದರಾಗಿದ್ದಾರೆ ಎನ್ನುವುದನ್ನು ಬಹಳಕೂಲಂಕಷವಾಗಿ ಹೇಡಸಲು ಬಡ್ಜೆಟ್ ಅಧಿವೇಶನದಲ್ಲಿ ಚರ್ಚೆಮಾಡಿದ್ದೇವೆ. ನಾನೂಸಹ ಬಿಚ್ಚಿದ ಮನಸ್ಸಿನಿಂದ ಇದು ಪೂರ್ಣಯಶಸ್ವಿಯಾಗುವುದರಲ್ಲಿ ಕೆಲವಾರು ದೋಷ ದೋಷಗಳು ಇವೆಯೆಂದು ಹೇಳುತ್ತಾ ನನ್ನ ಮಾನ್ಯ ಸದಸ್ಯರ ಕೆಲವರ ಸಲಹೆಗಳನ್ನು ಒಪ್ಪುವವನಾಗಿದ್ದೇನೆ ಏಕೆಂದರೆ ಪಾನನಿರೋಧ ನೀತಿಯಲ್ಲಿ ಸರ್ಕಾರಕ್ಕೆ ನೀರಿಕ್ಷಿಸಿದಷ್ಟು ಜಯಸಿಗಲಲ್ಲ. ಅದಕ್ಕೆ ಹೆಚ್ಚು ಇನ್ನಾವರೀತಿ ಈ ಸಭೆಯಲ್ಲಿ ಹೇಳಬೇಕು ! ಆದರೆ ನಾವು ನೀರಿಕ್ಷಿಸಿದಷ್ಟು ಜಯ ಸಿಗರಾರದೆ ಹೋಗುವುದಕ್ಕೆ ಅನೇಕ ಕಾರಣಗಳವೆ. ಆ ಕಾರಣಗಳಿಂದ ಇರತಕ್ಕ ಲ್ಯಾಕೂ ನಾವನ್ನು ಕೂಡಲೇಹೊಗರಾಡಿಸಬೇಕು. ಈ ಶಾಸನ ಎಫೆಕ್ಟಿವ್ ಆಗಿ ಆದಷ್ಟು ಒಳ್ಳೆಯ ರೀತಿ ಯಲ್ಲ ಜಾರಿಗೆ ಬರಬೇಕೆಂಬ ಉದ್ದೇಶದಿಂದ ಪ್ರಾಮಾಣಿಕತೆಯಿಂದ ಈ ಎಧೇಯಕವನ್ನು ರಚನೆ ಮಾಡಲಾಗಿದೆ. ಆದರೆ ತಮಗೆ ಅದರಲ್ಲಿ ಕೆಲವು ರೂಲ್ಸ್ ತೀಕ್ಷ್ಣವಾಗಿಕಾಣಬಹುದು ಆ ಬಗ್ಗೆ ನಾನು ಸ್ಪಷ್ಟವಾಗಿ ಹೋದಸಲವೇ ಹೇಳಿದ್ದೇನೆ. ಯಾವರೀತಿ ನಾವು ಪಾನನಿರೋಧ ಶಾಸನ ವನ್ನು ಜಾರಿಗೆ ತರುತ್ತಿದ್ದೇವೆ ಎನ್ನುವುದನ್ನು ಸಹ ಹೇಳಿದ್ದೇನೆ. ಆದೆಲ್ಲವೂ ತಮಗೆಲ್ಲರಿಗೂ ಗೊತ್ತಿದೆ. ಶ್ರೀಮಾರ್ ರೇವಣಸಿದಪ್ಪನವರು ಮಾತನಾಡುತ್ತಾ ಡಿ-ನೇಚರ್ಡ್ ಸ್ಪಿರಿಟ್ ರಿ-ನೇಚರ್ಡ್‌ಮಾಡಿ ಆದರಲ್ಲಿ ಸುಣ್ಣದ ನೀರುಕಲಸಿ ಜನರಿಗೆಕುಡಿಸುತ್ತಿದ್ದಾರೆ ಆರೀತಿ ದುರುಪ ಯೋಗವಾಗುತ್ತಿದೆಯೆಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಆದರೆ ಅನೇಕ ಕಡೆ ಗಳಲ್ಲಿ ಅದು ದುರುಪಯೋಗವಾಗುತ್ತಿದೆಯೆಂಬುದಾಗಿ ನನಗೆ ದೂರುಗಳೂ ಸಹ ಬಂದಿವೆ. ನನಗೆ ನೆನಪು ಇದ್ದಪ್ರಕಾರ ಡಿ-ನೇಚರ್ಡ್‌ಸ್ಪಿರಿಟ್ಟನ್ನು ಈಗ ಜನರಿಗೆ ಸಪ್ಲೈಮಾಡುವುದನ್ನು ರದ್ದು ಮಾಡಿದ್ದೇವೆ. ಮುಂದೆಯೂ ಇದನ್ನು ಕೊಡುವಾಗ ಸರಿಯಾಗಿ ವಿಚಾರಮಾಡಿಕೊಡಬೇಕೆಂದು ಹೇಳಲಾಗಿದೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಹಿಂದೆ ಕೊಟ್ಟವರಿಗೆ.

ಶ್ರೀ ವೀರೇಂದ್ರ ಪಾಟೀಲ್.—ನಾನು ಪೂರ್ತಿ ಹೇಳುವವರಿಗೂ ತಾಳುವುದಕ್ಕೆ ಆಗದೇ ಎಲ್ಲವನ್ನೂ ವಿಚಾರಮಾಡೋಣ. ವಿಷ ಕುಡಿಸುವಂತಹ ಪಾನೀಯವನ್ನು ತಯಾರುಮಾಡುವಂತಹ ಜನರಿಗೆ ಆ ಪ್ರವೃತ್ತಿಯನ್ನು ತಪ್ಪಿಸುವುದಕ್ಕೆ ಏನೇನು ಮಾಡಬೇಕೆಂಬುದನ್ನು ನಾವು ಯೋಚಿಸಿ

ನಂದಲೂ ಪ್ರಯತ್ನಮಾಡುತ್ತಿದ್ದೇವೆ. ಅದೇ ರೀತಿ ಡಿ-ನೇಚರ್ಡ್ ಸ್ಪಿರಿಟ್ಟನ್ನು ರಿ-ನೇಚರ್ಡ್ ಸ್ಪಿರಿಟ್ಟಾಗಿಮಾಡುವುದು-it is not fit-for even human Consumption. ಅಂಥಾದನ್ನು ಕುಡಿಯುವುದಕ್ಕೇ ಸಾಧ್ಯವಿಲ್ಲ. ಅಂಥಾದನ್ನು ಕುಡಿದರೆ ಸುಮಾರು 50-60 ವರ್ಷ ಬದುಕುವ ಮನುಷ್ಯ 20-30 ವರ್ಷಗಳಲ್ಲಿ ತನ್ನಜೀವನವನ್ನು ಮುಗಿಸಬೇಕಾಗುತ್ತದೆ. ಇಂಥಾದ್ದನ್ನೆಲ್ಲಾ ತಡೆಗಟ್ಟುವುದಕ್ಕೆ ನಮಗೆ ಬೇಕಾದ ಆಫೀಸರುಗಳನ್ನು ಆದರಲ್ಲೂ ವಿಶ್ವಾಸವಿರುವವರನ್ನು ಕಳುಹಿಸಿ ಎಕ್ಸ್‌ಪೈರಿ ಸಹ ಮಾಡಲಾಯಿತು. ಅದನ್ನು ಕೆಲವರು ಸರಿಯಾಗಿ ಉಪಯೋಗ ಮಾಡದೆ ದುರುಪಯೋಗ ಪಡಿಸಿದ್ದಾರೆಂದು ತಿಳಿದುಬಂದಿದೆ. ಅಂತಹ ಲೈಸೆನ್ಸ್‌ಗಳನ್ನು ಈಗ ಸಸ್ಪೆಂಡ್ ಮಾಡಿದ್ದೇವೆ. ಈ ಬಗ್ಗೆ ಯಾವ ರೀತಿಯಲ್ಲೂ ಎಲ್ಲೇ ಆಗಲಿ ದುರುಪಯೋಗವಾಗದ ಹಾಗೆ ನೋಡಿಕೊಳ್ಳಬೇಕೆಂದು ಕೂಲಂಕಷವಾಗಿ ಮತ್ತು ಬಹಳ ದೀರ್ಘವಾಗಿ ವಿಚಾರ ಮಾಡುತ್ತಿದ್ದೇವೆ.

ಶ್ರೀಮಾನ್ ಮಲ್ಲಾರಾಧ್ಯರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಡಿ-ನೇಚರ್ಡ್ ಸ್ಪಿರಿಟ್ ತೆಗೆದುಕೊಂಡು ಫ್ರೆಂಚ್ ಪಾಲಿಷ್ ತಯಾರು ಮಾಡುವಂತಹ ಸಣ್ಣ-ಸಣ್ಣ ಕಸಬು ದಾರರಿಗೆ ಇದರಿಂದ ಬಹಳ ಹಿಂಸೆಯಾಗಿದೆ ಅವರ ಜೀವನ ಬಹಳ ಕಷ್ಟವಾಗುತ್ತಿದೆ ಎಂದು ಹೇಳಿದರು. ನಾನು ಹೇಳುವುದಿಷ್ಟೆ ಆ ರೀತಿಯಾಗಿ ಕಸಬು ಮಾಡುವಂತಹ ಬಡವರ ಹೊಟ್ಟೆಯ ಮೇಲೆ ಹೊಡೆಯಬೇಕು. ಆವರಿಗೆ ಬರುತ್ತಿರುವ ಲಾಭವನ್ನು ಹೊಗಲಾಡಿಸಬೇಕು ಮತ್ತು ಅವರ ಜೀವನವನ್ನು ಕೆಡಿಸಬೇಕೆಂದು ಸರ್ಕಾರದ ಉದ್ದೇಶವಿಲ್ಲ. ಈ ಪಾನೀಯಗಳಿಗೆ ವಿಷ ಕೂಡಿಸುವಂತಹ ಪದ್ಧತಿಯನ್ನು ತಡೆಗಟ್ಟ ಬೇಕೆಂಬುದೇ ಸರ್ಕಾರದ ಉದ್ದೇಶ. ಇಂಥಾದ್ದಕ್ಕೆ ತಾವೆಲ್ಲರೂ ಸಹಕಾರ ಮಾಡಬೇಕು. ಸರ್ಕಾರದ ನೀತಿ ಇದನ್ನುಬಿಟ್ಟು ಮತ್ತೆ ಬೇರೆ ಇಲ್ಲ. ಸಾಮಾನ್ಯವಾಗಿ ಡಿ-ನೇಚರ್ಡ್ ಸ್ಪಿರಿಟ್‌ನ್ನು ಸುಮಾರು ಸಾವಿರ ಗ್ಯಾಲ್ಲನ್ ಗಳಷ್ಟು ಎಷ್ಟೋ ಜನರು ಕೇವಲ ಬೆಂಗಳೂರು ಸಿಟಿಯಲ್ಲಿ ಮಾತ್ರ ತೆಗೆದುಕೊಂಡಿದ್ದಾರೆ. ಈಗ ಒಟ್ಟು ಸುಮಾರು 80-82 ಲೈಸೆನ್ಸ್‌ದಾರರು ಇದ್ದಾರೆ. ಅವರೆಲ್ಲರೂ ಫ್ರೆಂಚ್ ಪಾಲಿಷ್ ಕಸಬು ಮಾಡುತ್ತಿದ್ದಾರೆ. ಆದರೂ ಅವರಲ್ಲಿ ಎಷ್ಟೋಜನ ಅದನ್ನು ದುರೂಪಯೋಗ ಪಡಿಸುತ್ತಿದ್ದಾರೆಂಬುದೂ ಸರ್ಕಾರದ ಗಮನಕ್ಕೆ ಬಂದಿದೆ. ಇದು ಒಂದು ಈಗ ಹೋಂ ಇಂಡಸ್ಟ್ರಿಯಾಗಿದೆ. ಇದಕ್ಕೆ ಯಾವ ಮೆಷನರಿಯೂ ಬೇಕಾಗಿಲ್ಲ. ಕೇವಲ 10-15 ಜನರು ಒಂದುಕಡೆ ಕೂತು ಮಾಡುವಂತಹ ಕೆಲಸ ಒಂದು ಕೊ-ಆಪರೇಟಿವ್ ಸೊಸೈಟಿ ಮಾಡಿಕೊಂಡು ಇದನ್ನು ಸದುಪಯೋಗ ಪಡಿಸುತ್ತೇವೆಂದು ಈಗ ಜನತೆ ಮುಂದೆ ಬಂದರೂ ಮತ್ತಷ್ಟು ಲೈಸೆನ್ಸ್ ಕೊಟ್ಟು ಡಬ್ಬಲ್ ಕ್ವಾಂಟಿಟಿಯನ್ನು ಅವರಿಗೆ ಕೊಡುವುದಕ್ಕೆ ನಾನು ತಯಾರಾಗಿದ್ದೇನೆ. ಆದರೆ ಅದನ್ನು ಮಾತ್ರ ದುರುಪಯೋಗ ಪಡಿಸಬಾರದು. ನಾನು ಬಂದಮೇಲೆ ನೀರಾ ಸೆಂಟರುಗಳನ್ನು ಹೆಂಡದ ಅಂಗಡಿಗಳಾಗಿ ಪರಿವರ್ತಿಸಿರುವ ಕಾರಣದಿಂದ ಅನೇಕ ಜನರ ಲೈಸೆನ್ಸ್‌ಗಳನ್ನು ಕ್ಯಾನ್ಸಲ್ ಮಾಡಲಾಗಿದೆ. ಆದರೆ ಸೌತ್ ಕೆನರಾ ಮಾನ್ಯ ಸದಸ್ಯರುಗಳು ಈ ಬಗ್ಗೆ ಸ್ವಲ್ಪ ತಪ್ಪು ಅರ್ಥ ಮಾಡಿಕೊಂಡಿರಬಹುದು. ಅಲ್ಲದೆ ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿ ಉಪಾಧ್ಯಕ್ಷರು, ಈ ಮಾನ್ಯ ಸಭೆಯ ಸದಸ್ಯರಾಗಿರುವ ಶ್ರೀಮಾನ್ ನಾಗಪ್ಪಆಳ್ವಾರವರು ಮಾತನಾಡಿದುದನ್ನು ನಾನು ಕೇಳಿದಾಗ ನನಗೆ ಒಂದು ವಿಚಾರ ಅನ್ನಿಸಿತು. ಆದರೆ ಮಾನ್ಯ ಸದಸ್ಯರಿಗೆ ಪಾನನಿರೋಧ ಬಗ್ಗೆ ವಿಶ್ವಾಸವಿಲ್ಲವೆಂದಲ್ಲ. ಪಾನನಿರೋಧಶಾಸನ ಜಾರಿಗೆತರುವಾಗ ನೀರಾ ಸೆಂಟರುಗಳನ್ನು ತೆರೆಯುವುದರಲ್ಲಿ ಸರ್ಕಾರದನೀತಿ ಸರಿಯಾಗಿಲ್ಲ. ಹಾಳಾಗಿ ಹೋಗಿದೆಯೆಂದು ಜಿಗುಪ್ಸೆಯಾಗಿ ಮಾತನಾಡಿದರು ನಾನು ಈ ಸಂದರ್ಭದಲ್ಲಿ ಹೇಳುವುದಿಷ್ಟೆ. ನೀರಾ ಸೆಂಟರುಗಳಿಗೆ ಲೈಸೆನ್ಸ್‌ಬೇಕು ಎಂದು ಪರ್ಮಿಟ್ ತೆಗೆದುಕೊಂಡು ಅದನ್ನು ಹೆಂಡದ ಅಂಗಡಿ ಗಳಾಗಿ ಪರಿವರ್ತಿಸಿ ಮಾಡುವಂತಹವರಿಗೆ ಯಾವ ರೀತಿಯಲ್ಲೂ ಅವಕಾಶ ಸಿಕ್ಕಬಾರದೆಂಬ ಉದ್ದೇಶದಿಂದಲೇ ಸರ್ಕಾರ ಈಗ ನೀರಾಸೆಂಟರುಗಳಿಗೆ ಲೈಸೆನ್ಸ್‌ಕೊಡುವುದನ್ನು ಸಹ ಅಬಾಲಿಷ್ ಮಾಡರಾಗಿದೆ. ಎಲ್ಲೆಲ್ಲಿ ನೀರಾಸೆಂಟರುಗಳಿವೆಯೋ ಅಲ್ಲಿ ಯಾವ ಉದ್ದೇಶಕ್ಕಾಗಿ

(ಶ್ರೀ ವೀರೇಂದ್ರ ಪಾಟೀಲ್)

ಈ ಸೆಂಟರುಗಳನ್ನು ತೆರೆದಿವೆಯೋ ಆ ಉದ್ದೇಶ ಸಾಧನೆಯಾಗುವಂತಹ ಧೋರಣೆಯನ್ನು ತಾಳುವುದಕ್ಕೆ ಪಾತ್ರ ಪ್ರಯತ್ನವಾಡಬೇಕು. ಅವರೂ ಸಹ ಇಪ್ಪು ಪೀರಿಯಡ್‌ನೊಳಗೇ ಪುನಃ ಲೈಸನ್ಸ್‌ನ್ನು ರಿನ್ಯೂಮಾಡಿಕೊಳ್ಳಬೇಕು ಎಂಬುದಾಗಿ ಹೇಳಿ ಲೈಸನ್ಸ್ ಕೊಡುವಬಗ್ಗೆ ಕೆಲವು ಷರತ್ತುಗಳನ್ನು ಈಗ ಹಾಕಲಾಗಿದೆ. ಆದರೆ ಆ ಲೈಸೆನ್ಸ್‌ನ್ನು ರಿನ್ಯೂಮಾಡಬೇಡಿ ಎಂದು ಅವರಿಗೆ ನಾವೇನೂ ಹೇಳಲಿಲ್ಲ. ಅಂದ ಮಾತ್ರಕ್ಕೆ ನೀರಾ ಸೆಂಟರುಗಳನ್ನೆಲ್ಲಾ ಅಬಾಲಿಷ್ ಮಾಡುತ್ತೇವೆಂದಲ್ಲ ದುರುಪಯೋಗವಾಗುತ್ತಿರುವುದನ್ನು ಯಾವ ರೀತಿಯಿಂದಲಾದರೂ ತಡೆಗಟ್ಟಬೇಕು. ಯಾವ ಒಂದು ಮುಖ್ಯೋದ್ದೇಶದಿಂದ ಈ ನೀರಾಸೆಂಟರುಗಳನ್ನು ತೆರೆಯುತ್ತಾರೋ ಆ ಒಂದು ಉದ್ದೇಶ ಸಾಧನೆಯಾಗಿ ಸದುಪಯೋಗವಾಗುವ ರೀತಿಯಲ್ಲಿ ನೀರಾ ಸೆಂಟರುಗಳು ಚೆನ್ನಾಗಿ ಯಶಸ್ವಿಯಾಗಿ ನಡೆಯುವಂತೆ ಮಾಡಬೇಕೆಂಬುದೇ ಸರ್ಕಾರದ ಇಚ್ಛೆ. ಅದಕ್ಕಾಗಿಯೇ ಈಗ ಕೆಲವು ರೂಲ್ಸ್‌ಗಳನ್ನು ಇಲ್ಲಿ ವಿಚಾರ ಮಾಡುತ್ತಿದ್ದೇವೆ. ಆ ರೀತಿಯೆಲ್ಲಾ ಮಾಡಿದಮೇಲೆ ನೀರಾಸೆಂಟರುಗಳನ್ನು ಯೋಗ್ಯರಾದವರಿಗೆ, ನಂಬಿಕೆಯವರಿಗೆ, ಅದರಲ್ಲೂ ಕಾನೂನುಗಳಿಗೆ ವಿರೋಧವಾಗಿ ಹೋಗದಂತೆ ನೋಡಿಕೊಳ್ಳುವವರಿಗೆ ಯಾರೇ ಆಗಲೀ ಇದನ್ನು ದುರುಪಯೋಗ ಮಾಡಲಾರರು ಎಂಬುದನ್ನು ಸರ್ಕಾರದವರು ಗಮನಿಸಿ ಲೈಸೆನ್ಸ್ ಕೊಡಬೇಕಾಗಿದೆ. ಈಗ ತಾತ್ಕಾಲಿಕವಾಗಿ ನೀರಾಸೆಂಟರುಗಳನ್ನು ಅಬಾಲಿಷ್ ಮಾಡಿದೆ. ಒಟ್ಟಿನಲ್ಲಿ ಇಡೀ ಸಂಸ್ಥಾನದಲ್ಲಿ ಪಾನನಿರೋಧ ಶಾಸನವನ್ನು ನಿಜವಾಗಿ ಪೂರ್ತಿಜಾರಿಯಲ್ಲಿ ಬರುವುದಕ್ಕೆ ತಕ್ಕ ಆನೆಸ್ಟ್ ಅಟೆಂಪ್ಟ್‌ಗಳನ್ನು ಈಗಾಗಲೇ ಮಾಡುತ್ತಿದ್ದೇವೆ. ಇದನ್ನೆಲ್ಲಾ ಮಾಡಿದರೂ ಸಂಪೂರ್ಣ ಸರಿಹೋಯಿತು ಎಂದು ಇನ್ನೂ ಹೇಳುವುದಕ್ಕಾಗುವುದಿಲ್ಲ. ಆದರೂ ಇನ್ನು ಮುಂದೆ ಇದು ಯಶಸ್ವಿಯಾಗುವುದರಲ್ಲಿ ಏನೂ ಸಂದೇಹವಿಲ್ಲ.

Sri C. M. ARUMUGHAM.—After 13 long years.

ಶ್ರೀ ವೀರೇಂದ್ರ ಪಾಟೀಲ್.—ಇನ್ನೊಂದು ವಿಷಯವನ್ನು ಈ ಸಭೆಯ ಗಮನಕ್ಕೆ ನಾನು ತರಬೇಕಾಗಿದೆ. ಶ್ರೀಮಾನ್ ಚನ್ನಬಸಪ್ಪನವರು ಹೋಂ ಮಿನಿಸ್ಟರ್ ಆಗಿದ್ದಾರೆ. ಅವರೂ ಸಹ ಈ ಕಾರ್ಯದಲ್ಲಿ ಸಾಕಷ್ಟು ಆಸಕ್ತಿಯನ್ನು ವಹಿಸಿದ್ದಾರೆ. ಅವರು ಬಂದ ಮೇಲೆ ಈ ಪಾನನಿರೋಧ ಕಾರ್ಯ ಬಹಳ ಹತೋಟಿಯಲ್ಲಿದೆ ಎಂಬುದಾಗಿ ಕೆಲವು ಮಾನ್ಯ ಸದಸ್ಯರು ಹೇಳಿದರು. ಅದರಿಂದಲೇ ಈಗ ಪೋಲೀಸ್ ಪೋರ್ಟ್‌ಫೋಲಿಯೊವನ್ನು ಅವರಿಗೆ ವಹಿಸಿದೆ. ಪೋಲೀಸಿನವರೆಲ್ಲರೂ ಅಲರ್ಟ್ ಆಗಿದ್ದಾರೆ. ಈ ಬಗ್ಗೆ ಸಾಕಷ್ಟು ಇಫೆಸ್ಟಿಗೇಷನ್ ಸಹ ನಡೆಯುತ್ತಿದೆ.

ಶ್ರೀ ವಿ. ಶ್ರೀನಿವಾಸ ಶೆಟ್ಟಿ.—ಇವತ್ತಿನ ದಿವಸದ ಪತ್ರಿಕೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಡಿ.ಐ.ಜಿ.ಯವರೇ ಅಲ್ಲಿನ ಇಡೀ ಜನರು ಈ ಪಾನನಿರೋಧ ಶಾಸನವನ್ನು ಅಲ್ಲಿ ಜಾರಿಗೆ ತರುವುದಕ್ಕೆ ಸಹಕಾರ ಕೊಡದೇ ಇದ್ದುದರಿಂದಲೇ ಯಶಸ್ವಿಯಾಗಿ ಮುತ್ತಷ್ಟು ಜೋರಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗಲಿಲ್ಲವೆಂಬುದಾಗಿ ಹೇಳಿದ್ದಾರೆ.

Sri C. J. MUCKANNAPPA.—A Press statement has appeared.

Sri C. M. ARUMUGHAM.—Does Jamkhandi include Bijapur, Sir.

(*Laughter*)

ಶ್ರೀ ವೀರೇಂದ್ರ ಪಾಟೀಲ್.—ಸಂಪೂರ್ಣ ಕೊ ಆಪರೇಷನ್ ಬೆಳಗಾಂನವರದು ಇಲ್ಲ; ಸುತ್ತಮುತ್ತಲಿರುವ ಪ್ರದೇಶಗಳವರ ಸಹಕಾರ ಕೆಲಮಟ್ಟಿಗೆ ಇಲ್ಲವೆಂದು ಅವರು ಹೇಳಿರಬೇಕು. ಆ ರೀತಿ ಡಿ. ಐ. ಜಿ. ಏನಂತಿ ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿದನ್ನು ನಾನು ವಿಚಾರ ಮಾಡುತ್ತೇನೆ.

ಶ್ರೀ ವಿ. ಶ್ರೀನಿವಾಸ ಶೆಟ್ಟಿ.—ಆ ರೀತಿ ನಾನು ಹೇಳಲಿಲ್ಲ. ಪ್ರೆಸ್ ಸ್ಟೇಟ್‌ಮೆಂಟ್ ಕ್ಲಿಯರ್ ಆಗಿದೆ. He stated there is no Co-operation coming from the whole district. Hence there is failure.

ಶ್ರೀ ವೀರೇಂದ್ರ ಪಾಟೀಲ್.—ಪ್ರೆಸ್ ಸ್ಟೇಟ್‌ಮೆಂಟ್ ಆ ರೀತಿಯೇ ಇದೆಯೆಂದರೆ ನಾನು ವಿಚಾರ ಮಾಡುತ್ತೇನೆ, ಪ್ರೆಸ್ ಸ್ಟೇಟ್‌ಮೆಂಟಾಗಿ ವರ್ತಮಾನ ಪತ್ರಿಕೆಯಲ್ಲಿ ಬಂದಿದೆ ಅಂದಮೇಲೆ ಇಷ್ಟೆಲ್ಲಾ ಚರ್ಚೆ ಏಕೆ? ಅವರು ಎಷ್ಟು ಹೊತ್ತು ಈ ರೀತಿ ಮಧ್ಯೆಮಧ್ಯೆ ಇಂಟರಪ್ಟ್ ಮಾಡಿದರೂ ನಾನು ಪೂರ್ತಿಯಾಗಿ ಎಲ್ಲ ವಿಷಯುಗಳನ್ನು ಹೇಳದೆ ಬಿಡುವುದಿಲ್ಲ.

Sri M. C. NARASIMHAN.—That is an unfair against us. We never meant when a responsible member drew attention to the press statement if this is the attitude the Government adopts, what is the use of debate?

ಅಧ್ಯಕ್ಷರು.—ಈ ರೀತಿ ಮಾಡುತ್ತಿದ್ದರೆ ನಾನು ಈ ಬಗ್ಗೆ ಈಗ ಇಲ್ಲಿ ಚರ್ಚೆ ಮಾಡುವುದನ್ನೇ ನಿಲ್ಲಿಸಬೇಕಾಗುತ್ತದೆ.

Sri M. C. NARASIMHAN.—If you also don't want debate, there is an end of the matter.

Mr. SPEAKER.—I want.....

Sri J. B. MALLARADHYA.—Now that the Hon'ble Minister has referred to a press statement.

Sri VEERENDRA PATIL.—I have not contradicted.

ಶ್ರೀ ವಿ. ಶ್ರೀನಿವಾಸ ಶೆಟ್ಟಿ.—ಯಾವ್ಯಾವ ಅಧಿಕಾರಿಗಳನ್ನು ಈ ಪಾನನಿರೋಧ ಶಾಸನವನ್ನು ಜಾರಿಗೆ ತರುವ ಬಗ್ಗೆ ಸರ್ಕಾರದವರು ನೇಮಿಸುತ್ತಾರೋ ಅವರ ಪೈಕಿ ಬಹು ಮುಖ್ಯರಾದಂಥ ಡಿ.ಐ.ಜಿ. ಮುಂತಾದ ಅಧಿಕಾರಿಗಳೇ ಈ ವಿಚಾರದಲ್ಲಿ ಅಲ್ಲಿ ಪೂರ್ಣ ಸಹಕಾರ ದೊರೆಯುತ್ತಿಲ್ಲ. ಸರ್ಕಾರದವರ ನೀತಿ ಯಶಸ್ವಿಯಾಗಿ ಮುಂದುವರೆಯುತ್ತಿಲ್ಲವೆಂದು ಹೇಳಬೇಕಾದರೆ ಸರ್ಕಾರದ ತತ್ವ ಈ ಬಗ್ಗೆ ಏನಾಯಿತು? ಸರ್ಕಾರದಿಂದ ನೇಮಕ ಮಾಡಲ್ಪಟ್ಟ ಪೋಲೀಸ್ ಅಧಿಕಾರಿಗಳೇ ಈ ರೀತಿ ಹೇಳಿದ ಮೇಲೆ ನಾವೇನು ಹೇಳುವುದು, ನೀವೇನು ಹೇಳುವುದು. I want to mention to the Hon'ble Minister.....

Mr. SPEAKER.—The House will now rise and meet again after half-an-hour.

The House adjourned for recess at Three of the Clock and reassembled at Forty Minutes past Three of the Clock.

[Mr. DEPUTY SPEAKER in the Chair]

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ನಾನು ಪಾನನಿರೋಧದ ನೀತಿಯಲ್ಲಿ ಎಷ್ಟರ ಮಟ್ಟಿಗೆ ಜಯ ನಮಗೆ ದೊರೆತಿದೆ ಎನ್ನುವಂಥ ವಿಷಯ ಪ್ರಸ್ತಾಪಿಸುತ್ತಿದ್ದೆ. ಮಾನ್ಯ ಸದಸ್ಯರು ಈ ನೀತಿಯಲ್ಲಿ ನಮಗೆ ಎಳ್ಳಷ್ಟೂ ಯಶಸ್ಸು ದೊರೆತಿಲ್ಲ ಎಂಬ ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ಆದರೆ ಅದರಲ್ಲಿ ಸತ್ಯಾಂಶವಿಲ್ಲವೆಂದು ನಾನು ಹೇಳ ಬಯಸುತ್ತೇನೆ. ಲಕ್ಷಾವಧಿ ಕುಟುಂಬಗಳು

(ಶ್ರೀ ವೀರೇಂದ್ರ ಪಾಟೀಲ್)

ಕುಡಿತದಿಂದ ಹಾಳಾದ್ದು, ಅವರ ಮನೆ ಮಠಗಳೆಲ್ಲಾ ಸಂಪೂರ್ಣವಾಗಿ ಕುಡಿತದ ಛಟದಿಂದ ಹಾಳಾದ್ದು ತಮಗೆಲ್ಲರಿಗೂ ಗೊತ್ತಿರುವ ವಿಷಯ. ಪಾನನಿರೋಧದಿಂದ ಅನೇಕರ ಆರ್ಥಿಕ ಮಟ್ಟ ಸಾಕಾದಷ್ಟು ಉತ್ತಮಗೊಂಡಿದೆಯೆಂದು ಹೇಳುವುದರಲ್ಲಿ ಅನುಮಾನವಿಲ್ಲ. ದಿನವಹಿ ದುಡಿತದಿಂದ ಸಂಪಾದಿಸುವುದರಲ್ಲಿ ಬಹು ಭಾಗವನ್ನು ಅನೇಕರು ಕುಡಿತಕ್ಕಾಗಿ ಹಾಳು ಮಾಡಿದ್ದರಿಂದ ಅನೇಕ ಸಂಸಾರಗಳು ಹಾಳಾಗಿವೆ. ಇದನ್ನು ಪ್ರತೇಕವಾಗಿ ಹೇಳ ಬೇಕಾಗಿಲ್ಲ. ಕೆಲವು ಭಾಗಗಳಲ್ಲಿ ನಿರೀಕ್ಷಿಸಿದಷ್ಟು ಜಯ ದೊರೆತಿಲ್ಲ, ಕೆಲವು ಭಾಗದಲ್ಲಿ ಜಯ ದೊರೆತಿದೆ ಎಂದು ಮತ್ತೊಮ್ಮೆ ಹೇಳಬೇಕಾಗಿದೆ.

ಒಂದು ವಿಷಯ ಎಲ್ಲರೂ ವಿಚಾರ ಮಾಡಬೇಕು. ನಮ್ಮ ದೇಶದಲ್ಲಿ ಶೇಕಡ 90-95 ಮಂದಿ ಬಡವರು ಈ ಒಂದು ಕುಡಿತದ ಹಾವಳಿಗೆ ಸಿಕ್ಕಿದ್ದಾರೆ. ಇಷ್ಟು ಮಂದಿ ಕುಡುಕರಿಂದ ಬರುವ ವರಮಾನದಿಂದ ದೇಶ ಕಟ್ಟಲು ಸಾಧ ವಿಲ್ಲ, ಅದರಿಂದ ದೇಶಕ್ಕೆ ಉಜ್ವಲ ಭವಿಷ್ಯ ಬರಲು ಸಾಧ್ಯ ವಿಲ್ಲ ಎಂದು ದೇಶದ ಗಣ್ಯ ನಾಯಕರು ಹೇಳುತ್ತಿದ್ದಾರೆ ಕುಡಿತವನ್ನು ನಿಲ್ಲಿಸಿದರೆ ಜನರ ಆರ್ಥಿಕ ಪರಿಸ್ಥಿತಿ ಉತ್ತಮವಾಗಿ ಅವರು ಸತ್ಪ್ರಜೆಗಳಾಗುತ್ತಾರೆಂದು ಉನ್ನತ ವ್ಯಕ್ತಿಗಳು ದೇಶದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಈಗ ಸಾರ್ವಜನಿಕರ ಸಹಕಾರದ ವಿಚಾರ ಕೂಡ ಪ್ರಸ್ತಾಪಿಸಲ್ಪಟ್ಟಿದೆ. ಒಂದು ವಿಷಯ ಮಾನ್ಯ ಸದಸ್ಯರು ಕೇಳಬೇಕು. ನಮ್ಮ ದೇಶದಲ್ಲೇಕೆ ಕಳ್ಳಬಟ್ಟಿ ತಯಾರಾಗುತ್ತಿದೆ, ಸ್ಮಗಲ್ ಆಗುತ್ತಿದೆ ಎಂಬುದರ ಅರಿವು ಮಾಡಿಕೊಳ್ಳಬೇಕು. ಈ ದಿವಸ ಪರಿಸ್ಥಿತಿ ಯಾವ ರೀತಿಯಿಂದ ಕೆಡುತ್ತಿದೆ ಎಂಬುದನ್ನು ವಿಚಾರ ಮಾಡಬೇಕು. ಮಾನ್ಯ ಸದಸ್ಯರು ಹೇಳಿದಪ್ರಕಾರ ಕಳ್ಳಬಟ್ಟಿ ಇಳಿಸುವ ವಿಚಾರ, ಸ್ಮಗಲ್ ಆಗುವ ಸಂದರ್ಭ ಇವುಗಳ ಬಗ್ಗೆ ಸಮಾಚಾರ ಒದಗಿಸಲು ಜನ ಮುಂದೆ ಬರುತ್ತಿಲ್ಲ. ಅವರು ಮುಂದೆ ಬರಲು ಭಯಪಡುತ್ತಿದ್ದಾರೆ. ಇಂಥ ಅನೇಕ ಉದಾಹರಣೆಗಳು ನನ್ನ ಗಮನಕ್ಕೆ ಬಂದಿವೆ. ಸರ್ಕಾರಕ್ಕೆ ಕೆಲವರು ಬಂದು ವಿಷಯ ತಿಳಿಸಿದಾಗ ಕಳ್ಳಬಟ್ಟಿ ತಯಾರಿಕೆಯಲ್ಲಿ ತೊಡಗಿದವರನ್ನು ಧಾಳಿಮಾಡಿ ಹಿಡಿದ ಮೇಲೆ ಇದಕ್ಕೆ ಕಾರಣರಾದವರನ್ನು ಊರಿನಲ್ಲಿರುವ ಸಂಬಂಧಪಟ್ಟವರು ಹಿಡಿದುಕೊಂಡು ಹೊಡೆದು ಊರಿನಿಂದ ಓಡಿಸಿರುವ ಅನೇಕ ಉದಾಹರಣೆಗಳು ನಮಾಜದ ಮುಂದಿದೆ. ಇದಕ್ಕೆ ಅವಕಾಶವಿರಬಾರದು, ಜನರಿಗೆ ರಕ್ಷಣೆಯಿರಬೇಕು, ನಮಾಜಕ್ಕೆ ಕ್ಷೇಮವಾಗಬೇಕು ಎಂಬುದೇ ನಮ್ಮ ಉದ್ದೇಶ. ಪ್ರತಿಯೊಬ್ಬ ಕುಡಿಯುವವನೂ ಅದು ಕೆಟ್ಟದ್ದೆಂದು ತಿಳಿದಿರುತ್ತಾನೆ. ಅದು ಒಳ್ಳೆಯದೆಂದು ಯಾರೂ ಹೇಳುವುದಿಲ್ಲ. ಈ ದಿವಸ ಸಮಾಜದಲ್ಲಿ ಕುಡಿಯುವುದು ಒಂದು ಕೀಳು ಚಟ. ಸಮಾಜದಲ್ಲಿ ಕೆಟ್ಟ ಹೆಸರು. ಬರುವುದೆಂದು ತಿಳಿದಿದ್ದರೂ ಕುಡಿಯುತ್ತಿದ್ದಾರೆ. ಕಳ್ಳಬಟ್ಟಿ ಅಥವಾ ಸ್ಮಗ್ಲಿಂಗ್‌ನಲ್ಲಿ ತೊಡಗಿರುವವರೂ ಅದು ಸರಿಯಲ್ಲವೆಂಬುದನ್ನು ತಿಳಿದುಕೊಂಡಿದ್ದಾರೆ; ಆದರೆ ಅದರಿಂದ ಲಾಭವಿದೆ, ಸುಲಭವಾಗಿ ಹಣ ಸಂಪಾದಿಸಬಹುದೆಂದು ಆ ಕೆಲಸದಲ್ಲಿ ತೊಡಗುತ್ತಾರೆ. ಈ ರೀತಿ ದಿನವಹಿ ನೂರಾರು ರೂಪಾಯಿ ಸಂಪಾದನೆ ಮಾಡುವವರಿಗೆ ಭಯವುಂಟಾದರೆ ಅವರ ಮನಸ್ಸಿನ ಮೇಲೆ ಸಾಕಷ್ಟು ಪರಿಣಾಮವಾಗುತ್ತದೆ ಎಂಬ ನಂಬಿಕೆಯಿದೆ. ಇದನ್ನು ಗಮನಿಸಬೇಕು. ನಾನು ಅನೇಕ ಕಡೆ ಹೋಗಿ ನೋಡಿದ್ದೇನೆ. ಕೆಲವು ಮಿತ್ರರು ಮಂತ್ರಿಗಳು ಹೋಗಿ ಧಾಳಿ ಮಾಡುತ್ತಿದ್ದಾರೆಂದು ಹೇಳಿದರು. ಅದು ಹಾಗಲ್ಲ. ಧಾಳಿ ಮಾಡಿದ ಮೇಲೆ ವಿಚಾರ ತಿಳಿದುಕೊಳ್ಳಲು ಮಂತ್ರಿಗಳು ಹೋದರೆ ಅದೇನೂ ಕೆಟ್ಟದಲ್ಲ. ಹಾಗೆ ಹೋಗಿ ವಿವರ ತಿಳಿದು ಕೊಳ್ಳುವುದು ಅವಶ್ಯಕ. ಈ ದಿವಸ ಕಳ್ಳಬಟ್ಟಿ ತಯಾರಿಸುವವರು, ಸ್ಮಗಲ್ ಮಾಡುವವರು, ಕುಡಿಯುವವರು ಹಾಗೆ ಮಾಡಿದರೆ ತಮಗೆ ಅಷ್ಟೇನೂ ಶಿಕ್ಷೆಯಾಗುವುದಿಲ್ಲ, ಹೇಗೋ ತಪ್ಪಿಸಿ ಕೊಳ್ಳಬಹುದು ಎಂಬ ಭಾವನೆ ಹೊಂದಿದ್ದಾರೆ. ಈ ರೀತಿ ಸಮಾಜದಲ್ಲಿ ಕಾನೂನಿನ ಭಯವಿಲ್ಲದಿದ್ದರೆ ಬಹಳ ಕೆಡುಕಾಗುತ್ತದೆ, ಸರ್ಕಾರ ನಡೆಸುವುದು ಕಷ್ಟವಾಗುತ್ತದೆ. ಇಂಥ ಭಯವಿಲ್ಲದೆ ಅಕ್ರಮವಾದ

ನೀತಿಯಲ್ಲಿ ತೊಡಗಿರುವವರ ವಿಚಾರದಲ್ಲಿ ಸಹಾನುಭೂತಿಯೇಕೆ ಎಂದು ನಾನು ಕೇಳಬೇಕಾಗಿದೆ. ಇವರು ಸಮಾಜ ದ್ರೋಹಿಗಳು ಎಂದು ಒಪ್ಪಿಕೊಳ್ಳಬೇಕು. ಇವರಿಗೆ ಅವಕಾಶವಿರಬಾರದು. ಬರೀ ಕಾನೂನು ಮಾಡುವುದರಿಂದ ಎಲ್ಲವೂ ಆಗುತ್ತದೆಂದು ಹೇಳುವುದಿಲ್ಲ. ಪ್ರತಿಯೊಬ್ಬರಿಗೂ ಒಂದು ಭಯದ ವಾತಾವರಣವಿರಬೇಕು. ಎಲ್ಲಿಯವರೆಗೆ ಕಠಿಣ ಶಿಕ್ಷೆಯಾಗುತ್ತದೆಂಬ ಭಯ ವುಂಟಾಗುವಂತೆ ಮಾಡುವುದಿಲ್ಲವೋ ಅಲ್ಲಿಯವರಿಗೆ ತಪ್ಪು ಮಾಡುವವರನ್ನು ತಡೆಗಟ್ಟುವುದು ಕಷ್ಟ. ಉದಾಹರಣೆ ಹೇಳುವುದಾದರೆ ನಾನು ಕೆಲವು ಆಫೀಸರುಗಳ ಜೊತೆಯಲ್ಲಿ ಮಾತನಾಡುವಾಗ ಆಸಕ್ತಿ ವಹಿಸಿ ಪಾನನಿರೋಧದ ವಿಚಾರದಲ್ಲಿ ಕೆಲಸ ಮಾಡುತ್ತಿದ್ದವರಲ್ಲಿ ಒಬ್ಬ ಆಫೀಸರು ಬಹಳ ಬೇಜಾರು ಪಟ್ಟುಕೊಂಡು ಒಂದು ಉದಾಹರಣೆ ಹೇಳಿದರು. ಮರೆನಾಡಿನಲ್ಲಿ ಒಂದು ಕಡೆ ಬಹಳವಾಗಿ ಕಳ್ಳಬಟ್ಟಿ ತಯಾರಿಸುತ್ತಿದ್ದರು. ಅದು ಗೊತ್ತಾದ ಮೇಲೆ ರಾತ್ರಿ ರಾರಿ ಮತ್ತು ಜೀಪ್ ತೆಗೆದು ಕೊಂಡು ಹೋಗಿ ರಾತ್ರಿಯೆಲ್ಲಾ ಒಂದೇ ಸಮ ಧಾಳಿ ಮಾಡಿ ಸುಮಾರು 300–400 ಗ್ಯಾಲನ್ ವಶಪಡಿಸಿಕೊಂಡು ಕೋರ್ಟಿನಲ್ಲಿ ಕೇಸ್ ಹಾಕಿದಾಗ 15 ರೂಪಾಯಿಗಳ ಜುಲ್ಮಾನೆ ಮಾತ್ರ ಹಾಕಿದರು, ಹೀಗಾದರೆ ನಿರೋಧವನ್ನು ಜಾರಿಗೆ ತರುವ ಸಿಬ್ಬಂದಿ ಏನು ತಾನೆ ಮಾಡಿ ತಡೆಗಟ್ಟಲು ಸಾಧ್ಯ ಎಂದು ಹೇಳಿದರು. ಹೀಗೆ ಅಲ್ಪ ಸ್ವಲ್ಪ ಶಿಕ್ಷೆಯಾದರೆ ಜನ ಹೆದರುವುದಿಲ್ಲ, ಮತ್ತೆ ತಮ್ಮ ವೃತ್ತಿಯಲ್ಲಿ ನಿರತರಾಗುತ್ತಾರೆ. ಇದರಿಂದ ಕಳ್ಳಬಟ್ಟಿ ತಯಾರಿಕೆ ವಗೈರೆಯಲ್ಲಿ ತೊಡಗಿದ್ದವರು ಒಂದು ಭಾವನೆಯಿಂದ ವಿಶೇಷವಾಗಿ ತಯಾರಿಸಲು ಅವಕಾಶವಾಗುತ್ತಿದೆ. ನಾಲ್ಕೈದು ವರ್ಷಗಳಿಂದ ಮಾಡುತ್ತಿದ್ದರೂ ಯಾರೂ ಕೇಳುತ್ತಿಲ್ಲ ಎಂದು ಕೆಲವರು ಧೈರ್ಯಗೊಂಡಿದ್ದಾರೆ. ಕಾರಣ ಅವರಿಗೆ ಭಯವಿಲ್ಲ. ಅಲ್ಲಿಯವರೆಗೆ ಇಂಪ್ರಿಸನ್‌ಮೆಂಟ್ ಶಿಕ್ಷೆ ಸಾಕಷ್ಟು ಕೊಡುವುದಿಲ್ಲ ಎಲ್ಲಿಯವರೆಗೆ ಸಮಾಜದಲ್ಲಿರುವ ರೋಪ, ಕಳ್ಳಬಟ್ಟಿ ತಯಾರಿಕೆ ವಗೈರೆ ಕಡಮೆಯಾಗುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಹೋದ ಸಲವೇ ಹೇಳಿದೆ. ಪ್ರತಿದಿನವೂ ಹತ್ತು ಹದಿನೈದು ಗ್ಯಾಲನ್ ತಯಾರುಮಾಡಿ, ಇಪ್ಪತ್ತು ಇಪ್ಪತ್ತೈದು ರೂಪಾಯಿಗಳಿಸುವ ಅನುಭವವಾಗಿರುವವರನ್ನು ಎಷ್ಟೇ ಪ್ರಯತ್ನ ಮಾಡಿದರೂ ನಿಲ್ಲಿಸುವುದಕ್ಕಾಗುವುದಿಲ್ಲ. ಮಧ್ಯ ಪ್ರದೇಶದಲ್ಲಿ ಢಕಾಯತರಿದ್ದರು, ಢಕಾಯತಿ ಮಾಡುವುದನ್ನು ತಪ್ಪಿಸುವ ಉದ್ದೇಶವೇನಾಯತೆಂಬುವುದನ್ನು ನೋಡಿ. ಯಾರು ಇಂಥ ವ್ಯಕ್ತಿಯನ್ನನುಸರಿಸುತ್ತಾರೋ ಅವರನ್ನು ಆ ವ್ಯಕ್ತಿಯಿಂದ ಬಿಡಿಸುವುದು ಅಷ್ಟು ಸುಲಭವಲ್ಲ.....

Sri C. M ARUMUGHAM—. Mr. Speaker, now he is saying that it will be successful if penal provisions are there. Such provisions are in Bombay Act. Is prohibition successful in the four districts of Bombay?

ಶ್ರೀ ವೀರೇಂದ್ರ ಪಾಟೀಲ್.— ಈಗ ಅವರು ಹೇಳಿದ ಎಲ್ಲ ವಿಚಾರಗಳಿಗೂ ಉತ್ತರ ಕೊಡುವುದು ನನ್ನ ಉದ್ದೇಶ. ಪಾನನಿರೋಧದಲ್ಲಿ ಜಯ ಸಿಕ್ಕಿಲ್ಲವೆಂದು ಹೇಳಿದರು. ಏಕೆ? ಎಲ್ಲಿಯವರೆಗೆ ಸಾರ್ವಜನಿಕ ಸಹಕಾರ ಸಿಕ್ಕಬೇಕೆಂದೂ ಯಾವರೀತಿ ಸಿಕ್ಕಬೇಕೆಂದೂ ಹೇಳುತ್ತಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— ಬೊಂಬಾಯಿನಲ್ಲಿ ಈ ಕಾನೂನು ಏಕೆ ಹಿಡಿತಕ್ಕೆ ಸಿಕ್ಕಿಲ್ಲ ವೆಂದು ಹೇಳುತ್ತೇನೆ. ಮೊನ್ನೆ ಶ್ರೀ ವೀರೇಂದ್ರ ಪಾಟೀಲರೂ ಚನ್ನಬಸಪ್ಪನವರೂ ಎಲ್ಲಿಯೋ ಹೋಗಿ ಮಡಿಕೆ, ಕುಡಿಕೆ ಮುಂತಾದುವನ್ನು ಹಿಡಿದು ವಶಪಡಿಸಿಕೊಂಡುದು ಏನಾಯಿತು?

ಶ್ರೀ ವೀರೇಂದ್ರಪಾಟೀಲ್.— ಆ ವಿಷಯವನ್ನೇ ಹೇಳುತ್ತಿದ್ದೇನೆ. ಈಗ ಸಾರ್ವಜನಿಕ ಸಹಕಾರ ಎಲ್ಲಿಯವರೆಗಿದೆ, ಎಲ್ಲಿಯವರೆಗೆ ಬೇಕು, ನಮ್ಮ ಸಮಾಜ ಬೂಟ್‌ಲೆಗರ್ಸ್‌ನಿಂದ ವಿಮುಕ್ತವಾಗ ಬೇಕಾದರೆ ಸಮಾಜ ಏನು ಮಾಡಬೇಕೆಂಬುದನ್ನು ಒತ್ತಿ ಹೇಳುತ್ತಿದ್ದೇನೆ. ಕೆಲವು ವಿಚಾರಗಳನ್ನು ಈಗಾಗಲೇ ಹೇಳಿದ್ದೇನೆ. ಈ ಕಾನೂನು ಜಾರಿಗೆ ಬಂದ ತಕ್ಷಣ ಎಲ್ಲ ಕಡೆಯೂ ಕುಡಿತ ಮತ್ತು ಕಳ್ಳಭಟ್ಟಿ ನಿಂತು ಹೋಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಅದರೂ ಕಾನೂನಿನ ಭಯ ಜನರಿಗೆ ಹುಟ್ಟಬೇಕು.

Sri C. M. ARUMUGHAM.— Are we hearing a debate or Ramayana ? I am afraid we are hearing Ramayana which will take about one month.

ಶ್ರೀ ವೀರೇಂದ್ರ ಪಾಟೀಲ್.— ಈಗ ಇನ್ನೊಂದು Social evil, ಈ ಅನಿಷ್ಟವನ್ನು ತೊಡೆದು ಹಾಕುವುದರಲ್ಲಿ ಸಂಪೂರ್ಣ ಜಯ ಸಿಕ್ಕಲ್ಲವೆಂಬ ಕಾರಣದಿಂದ ಪಾನನಿರೋಧವನ್ನೇ ತೆಗೆದು ಹಾಕಬೇಕೆಂದು ಹೇಳಿದರೇನು ಪ್ರಯೋಜನ ? Indian Penal Code, Criminal Code, ಮುಂತಾದ ಕಾನೂನುಗಳು ಜಾರಿಯಲ್ಲವೆ, ಆದರೂ ಡಕಾಯಿತಿ, ಖೂನಿ ಮುಂತಾದ ಅಕೃತ್ಯಗಳು ತಪ್ಪಿಲ್ಲ, ಆಗುತ್ತಲೇ ಇವೆ. ಇಷ್ಟು ಮಾತ್ರಕ್ಕೇ ಈ ಕಾನೂನುಗಳೇ ಬೇಕಿಲ್ಲವೆಂದು ಹೇಳುವುದಕಾಗುವುದಿಲ್ಲ. ಅನ್ಯಾಶ್ಯತೆ ಇದೆ, ಇದೊಂದು ಸಾಮಾಜಿಕ ಅನಿಷ್ಟ ; ಇದು ಹೊಗ ಬೇಕೆಂದು ಕಾನೂನು ಮಾಡಿದ್ದಾಗಿದೆ ; ಆದರೂ ಅಲ್ಲಲ್ಲಿದೆಯೆಂದು ಆ ಕಾನೂನನ್ನು ತೆಗೆದು ಹಾಕಿಲ್ಲ, ಇದ್ದೇ ಇದೆ.....

Sri C. J. MUCKANNAPPA.— It has not done any harm to society. On the other hand by this Bill you are supporting two or three people to become fatter and fatter and get money you come forward and say that you with implement prohibition in Bangalore; We will co-operate with you.

ಶ್ರೀ ವೀರೇಂದ್ರ ಪಾಟೀಲ್.—ಯಾವುದೇ ಒಂದು ಕಾನೂನಿನಿಂದ ಸಾಕಷ್ಟು ಜಯ ಸಿಕ್ಕಲ್ಲವೆಂದು ಹೇಳಿ ಆ ಕಾನೂನೆ ಬೇಡವೆನ್ನುವುದು ಸರಿಯಲ್ಲ. ನನಗೆ ಒಂದು ಸಂಗತಿ ನೆನಪಿಗೆ ಬರುತ್ತದೆ.

ಶ್ರೀ ಎಂ. ಸಿ. ನರಸಿಂಹ.— Persuation ಅಥವಾ ಮನವೊಲಿಸುವ ಮಾರ್ಗದಿಂದ, ಈ ಕೆಡಕನ್ನು ದೂರ ಮಾಡಬೇಕು, ಕಾನೂನು ಅಥವಾ ದಂಡನೆಯಿಂದ ಇದು ಹೋಗುವುದಿಲ್ಲವೆಂದು, ಅವರು ಇದಕ್ಕೆ ಉದಾಹರಣೆ ಕೊಟ್ಟರು.

ಶ್ರೀ ವೀರೇಂದ್ರ ಪಾಟೀಲ್.— ಕೆ. ಜಿ. ಎಫ್. ಯೂನಿಯನ್ ಪ್ರಾರಂಭ ಮಾಡುವಾಗ ಶೇಕಡ 10 ರಷ್ಟು ಮಂದಿ ಕುಡಿಯುತ್ತಿದ್ದರು, ಈಗ ಶೇಕಡ 100 ಮಂದಿ ಕುಡಿಯುತ್ತಿದ್ದಾರೆ ಎಂದು ಹೇಳಿದರು.....

Sri M. C. NARASIMHAN.— I did not say 100% but I said 60%

ಶ್ರೀ ವೀರೇಂದ್ರ ಪಾಟೀಲ್.— ಹಿಂದೆ ಶೇಕಡ 10 ಇದ್ದು ಈಗ 60 ಆಗಿದ್ದರೆ ಇನ್ನು ಶೇಕಡ 50 ರಷ್ಟನ್ನು ಇವರೇ ಪ್ರೋರೇಪಿಸಿ ಮಾಡಿಸಿದ್ದಾರೆಂದು ಅರ್ಥವಾಗುತ್ತದೆ.

Illicit distillation ಹೆಚ್ಚಾಗಿದೆಯೆಂದು ಹೇಳಿದರು. ಕಾನೂನು ಮಾಡಿ ಪಾನನಿರೋಧ ಮಾಡಿದ್ದುದರಿಂದ ಇದು ಹೆಚ್ಚಾಯಿತೆಂದರೆ ಇದು ಒಪ್ಪುವ ಮಾತಲ್ಲ. ಬೆಂಗಳೂರು 'ವೆಟ್' ಪ್ರದೇಶವಾದರೂ ಇಲ್ಲಿ ಕೂಡ Illicit distillation ಇದೆ. ಈ ಕಳ್ಳಭಟ್ಟಿ ಬರಿಯ ಬೆಂಗಳೂರಿನಲ್ಲಿ ಮಾತ್ರವಲ್ಲ, ರಷ್ಯಾ ದೇಶದಲ್ಲಿ ಕೂಡ ಇದೆ. ಆದುದರಿಂದ ಪಾನನಿರೋಧ ಮಾಡಿರುವುದರಿಂದ ಕಳ್ಳಭಟ್ಟಿ ಇದೆ ಎಂದು ಹೇಳುವುದು ಸರಿಯಲ್ಲ. ರಷ್ಯಾ ದೇಶದಲ್ಲಿ illicit distillation ಇದೆಯೆಂಬುದು ಪತ್ರಿಕೆಗಳಿಂದ ವ್ಯಕ್ತವಾಗುತ್ತದೆ.....

Sri M. C. NARASIMHAN.— Sir, he stated that I said 100 per cent .It is a total lie. Can he go on saying anything he pleases misrepresenting the views of members ? When he points out an individual and says something, should he not have the Courtesy to know what he said ? He stopped that I said 100 per cent. It is a total lie. Like that he goes on felling. I will have to on interrupting him. At least when a Minister replies to a Bill, he should be more responsible.

ಶ್ರೀ ವೀರೇಂದ್ರ ಪಾಟೀಲ್.— ರಷ್ಯಾ ದೇಶದ ವಿಚಾರವನ್ನು ಹೇಳುತ್ತಿದ್ದೆ.....

Sri V. SRINIVASA SHETTY.— Does the Minister know that they also introduced prohibition there and it was a total failure ?

Sri VEERENDRA PATIL.— " Home brewers of Vodka in Russia and their customers are liable to severe penalty " this was the resolution passed by the Supreme Soviet of the Russian Republic. This appears in the ' Sunday Stateman ' Dated 14-5-1961.....

Sri C. J. MUCKANNAPPA.— Sir, you have given a ruling that members should give very faithful information which cannot be questioned or disputed by anybody. He is quoting something which has appeared some where, some years back.....

4-00 P.M.

ಶ್ರೀ ವೀರೇಂದ್ರ ಪಾಟೀಲ್.—1961 ನೇ ಇಸವಿಯಲ್ಲಿ ಆದದ್ದು ರೀಸೆಂಟ್ ಆಗಿರುವುದನ್ನು ನಾನು ಹೇಳುತ್ತಿದ್ದೇನೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಶ್ರೀಮಾನ್ ನರಸಿಂಹ ಅವರು ಹೇಳಿದರು ಈ ಬಿಲ್ಲಿನಲ್ಲಿ ಕಾನೂನಿನಿಂದ ಮತ್ತು ದಂಡದಿಂದ ತಪ್ಪಿತನ್ಮರನ್ನು ಶಿಕ್ಷೆಮಾಡುತ್ತೆವೆಂದು ಭಯ ಹುಟ್ಟಿಸಿದ್ದಾರೆಂದು. ಅದಕ್ಕೋಸ್ಕರ ನಾನು ಇದನ್ನು ಹೇಳ ಬೇಕಾಯಿತು. ಎಲ್ಲ ವೆಟ್ ಏರಿಯಾ ಇವೆಯೋ ಅಲ್ಲ ಪ್ರೊಹಿಬಿಷನ್ ಇಲ್ಲ. "Home brewers of vodka in Russia and their customers are made liable to stiffer punishment" ಅದಕ್ಕೋಸ್ಕರ ಪನಿಷ್‌ಮೆಂಟ್ ಕಂಪಲ್‌ಸರಿ ಮಾಡಿದ್ದೇವೆ. ಇಲ್ಲಿಸಿಟ್ ಡಿಸ್ಟಿಲೇಷನ್ ನಲುವಾಗಿ ಇಂಪ್ರಿಜನ್‌ಮೆಂಟ್ ಇದೆ. ಇಪ್ಪೊತ್ತು ರಷ್ಯಾದಲ್ಲಿ ಪ್ರೊಹಿಬಿಷನ್ ಬಗ್ಗೆ ನೀತಿ ಏನಿದೆ ಎಂಬುದನ್ನು ನಾನು ಹೇಳುತ್ತೇನೆ. "The Official Soviet explanation is that intoxication is a remnant of capitalistic conciousness" ಎಂದು ಹೇಳಿದ್ದಾರೆ. ಈ ಒಂದು ವಾದವನ್ನು ಶ್ರೀಮಾನ್ ನರಸಿಂಹನ್ ಅವರು ಒಪ್ಪಿಕೊಳ್ಳುತ್ತಾರೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಕುಡಿತ ಏನಿದೆ ಅದು ಪ್ರೊಹಿಬಿಟ್ ಆಗಬೇಕು. ಪಾನ ನಿರೋಧವನ್ನು ಯಶಸ್ವಿಯಾಗಿ ಮಾಡಬೇಕು ಎಂದು ವಾದ ಇದೆ. ರಷ್ಯಾದೇಶದವರು ಹೇಳಿದ ಮಾತನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ತಾವು ಅದನ್ನು ಅನುಮೋದಿಸುತ್ತೀರೋ ಅಥವಾ ವಿರೋಧಿಸುತ್ತೀರೋ ?

ಶ್ರೀ ವೀರೇಂದ್ರ ಪಾಟೀಲ್.—ರಷ್ಯಾದಲ್ಲಿ ಯಾವ ಪಾಲಿಸಿ ಥೋರಣೆಯನ್ನು ತಾಳಿದ್ದಾರೋ ಅದನ್ನು ಸಂಪೂರ್ಣವಾಗಿ ಅಕ್ಷರ ಸಹ ಒಪ್ಪಿಕೊಳ್ಳುತ್ತೇವೆ ಎಂದು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ.

Sri M. C. NARASIMHAN.—It is all wrong. The point that we were making out is that you cannot stamp out illieit distillation or the drink habit by force of compulsion, by force of law, under the existing set up. The soviet set up is entirely different. Though there is illicit distillation, Though there is legislation for it, you must also understand that simultaneously drinking is allowed. That makes a world of difference between the two positions.

ಶ್ರೀ ವೀರೇಂದ್ರ ಪಾಟೀಲ್.—ಬಿಲ್ಲಿನ ಮೇರೆ ಮಾತನಾಡುತ್ತಾ ಅವರು ಹೇಳಿದರು, ಬೊಂಬಾಯಿ ರೂಲ್ಸ್ ಅನ್ನು ಕಾಪಿ ಮಾಡಿದ್ದಿರೆಂದು. ಅದರ ಬಗ್ಗೆ ಕೆಲವು ಉದಾಹರಣೆಗಳನ್ನು ಹೇಳುತ್ತೇನೆ. ಈಗ ಕುಡುಕರಿಗೆ ಕುಡಿಯುವುದಕ್ಕೆ ಒಂದು ಶಿಕ್ಷೆ, ಸ್ಮಗ್ಲಿಂಗ್ ಮಾಡುವುದಕ್ಕೆ ಒಂದು ಶಿಕ್ಷೆ ಅದೇ ರೀತಿ ಇಲ್ಲಿಸಿಟ್ ಡಿಸ್ಟಿಲೇಷನ್ನಿಗೆ ಒಂದು ಶಿಕ್ಷೆ ಈ ರೀತಿ ಏತಕ್ಕೆ ಮಾಡುತ್ತಿದ್ದೀರಿ

(ಶ್ರೀ ವೀರೇಂದ್ರ ಪಾಟೀಲ್)

